ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳಮಠ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಪಿ. ಸಂದೇಶ್

ಕಿಷಿನ್ ಟಿ. ಪಂಜಾಬಿ ವಿರುದ್ಧ ಸುರೇಶ್ ಕೊಠಾರಿ

ಸಿ.ಸಿ.ಸಿ.ಸಂಖ್ಯೆ: 2047/2017, ದಿನಾಂಕ 25 ನೇ ಅಕ್ಟೋಬರ್, 2019.

ಆದೇಶ

ನ್ಯಾಯಮೂರ್ತಿ ಶ್ರೀ ಎಚ್.ಪಿ. ಸಂದೇಶ್:

ಈ ನಿಂದನಾ ಅರ್ಜಿಯನ್ನು, ಎಂ.ಎಫ್.ಎ.ಸಂಖ್ಯೆ: 6323/2016 ಕ್ಕೆ ಸಂಬಂಧಿಸಿದ ಎಂ.ಎಫ್.ಎ.ಸಂಖ್ಯೆ: 7719/2016 ರಲ್ಲಿ ಈ ನ್ಯಾಯಾಲಯವು ಹೊರಡಿಸಿದದಿನಾಂಕ: 08.06.2017 ರ ಆದೇಶವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿರುವುದಕ್ಕಾಗಿ ಆಪಾದಿತನ ಹಾಜರಿಯನ್ನು ಖಾತರಿಪಡಿಸುವಂತೆ ಹಾಗೂ ಆತನಿಗೆ ಶಿಕ್ಷೆ ನೀಡುವಂತೆ ಈ ನ್ಯಾಯಾಲಯವನ್ನು ಕೋರಿ ಭಾರತ ಸಂವಿಧಾನದ 215 ನೇ ಅನುಚ್ಛೇದದೊಂದಿಗೆ ಓದಲಾದ ನ್ಯಾಯಾಲಯ ನಿಂದನೆ ಅಧಿನಿಯಮ, 1971 ರ 11 ಹಾಗೂ 12 ನೇ ಪ್ರಕರಣಗಳಡಿಯಲ್ಲಿ ಸಲ್ಲಿಸಲಾಗಿರುತ್ತದೆ.

ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳು ಈ ಮುಂದಿನಂತಿವೆ:

2. ಇದರಲ್ಲಿನ ದೂರುದಾರನು, ಆಪಾದಿತನ ವಿರುದ್ಧ ನಿರ್ಬಂಧಕಾಜ್ಞೆಯ ಪರಿಹಾರ ಹಾಗೂ ಇತರೆ ಪರಿಹಾರಗಳನ್ನು ಕೋರಿ ಮೂಲ ದಾವೆಸಂಖ್ಯೆ: 10415/2015 ರಲ್ಲಿ ದಾವೆಯನ್ನು ಹೂಡಿರುತ್ತಾನೆ.ದೂರುದಾರನು, ಇಲ್ಲಿನ ಆಪಾದಿತನಿಗೆ ಅನುಕ್ರಮವಾಗಿ ನೀರಿನ ಸಂಪರ್ಕವನ್ನು ಮತ್ತೆ ಕಲ್ಪಿಸಲು ನಿರ್ದೇಶನವನ್ನು ನೀಡುವಂತೆ ಹಾಗೂ ಆಪಾದಿತನ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಕೋರಿ ಮಧ್ಯಂತರ ಅರ್ಜಿಸಂಖ್ಯೆ: 1 ಹಾಗೂ 2 ನ್ನು ಸಹ ಸಲ್ಲಿಸಿರುತ್ತಾನೆ.ದಿನಾಂಕ: 22.08.2016 ರಂದಿನ ಆದೇಶದ ಮೂಲಕ ಅಧಿವಿಚಾರಣಾ ನ್ಯಾಯಾಧೀಶರು, ನೀರಿನ ಸಂಪರ್ಕವನ್ನು ಮತ್ತೆ ಕಲ್ಪಿಸಲು ಆಪಾದಿತನಿಗೆ ನಿರ್ದೇಶಿಸಿದ ಮಧ್ಯಂತರ ಅರ್ಜಿಸಂಖ್ಯೆ: 1 ನ್ನು ಅಂಗೀಕರಿಸಿ, ತಾತ್ಕಾಲಿಕ ನಿರ್ಬಂಧಕಾಜ್ಞೆಯ ಪರಿಹಾರ ಕೋರಿರುವ ಮಧ್ಯಂತರ ಅರ್ಜಿಸಂಖ್ಯೆ: 2 ನ್ನು ತಿರಸ್ಕರಿಸಿರುತ್ತಾರೆ.ಮಧ್ಯಂತರ ಅರ್ಜಿಸಂಖ್ಯೆ: 2 ರ ತಿರಸ್ಕರಣೆಯಿಂದ ಬಾಧಿತನಾಗಿರುವ ದೂರುದಾರನು ಎಂ.ಎಫ್.ಎ.ಸಂಖ್ಯೆ: 6323/2016 ನ್ನು ಸಲ್ಲಿಸಿರುತ್ತಾನೆ ಹಾಗೂ ಇಲ್ಲಿನ ಆಪಾದಿತನು, ಈ ನ್ಯಾಯಾಲಯದ ಮುಂದೆ ಮಧ್ಯಂತರ ಅರ್ಜಿಸಂಖ್ಯೆ: 1 ನ್ನು ಅಂಗೀಕರಿಸಿದ ಆದೇಶವನ್ನು ಪ್ರಶ್ನಿಸಿ ಎಂ.ಎಫ್.ಎ.ಸಂಖ್ಯೆ: 7719/2016 ನ್ನು ಸಲ್ಲಿಸಿರುತ್ತಾನೆ.

3. ಈ ನ್ಯಾಯಾಲಯವು ಎರಡೂ ಎಂ.ಎಫ್.ಎ.ಗಳನ್ನು ಸಂಯೋಜಿಸಿ, ಅನುಸೂಚಿತ ಸ್ವತ್ತಿನಲ್ಲಿ ನಿರ್ಮಾಣ ಚಟುವಟಿಕೆಯನ್ನು ನಿಲ್ಲಿಸುವಂತೆ ಇದರಲ್ಲಿನ ಆಪಾದಿತನಿಗೆ ನಿರ್ದೇಶಿಸಿದಿನಾಂಕ: 08.06.2017 ರಂದು ಸಾಮಾನ್ಯ ಆದೇಶವನ್ನು ಹೊರಡಿಸಿರುತ್ತದೆ.ಆದಾಗ್ಯೂ, ಆಪಾದಿತನು ಸದರಿ ಆದೇಶವನ್ನು ಮೀರಿ, ನಿರ್ಮಾಣ

ಕಾರ್ಯವನ್ನು ಮುಂದುವರೆಸಿ, ಈ ನ್ಯಾಯಾಲಯದ ಆದೇಶವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿರುತ್ತಾನೆ.ಹಾಗಾಗಿ, ಪ್ರಸ್ತುತ ನಿಂದನಾ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ.

4. ನಿಂದನಾ ಅರ್ಜಿಯನ್ನು ಅನುಸರಿಸಿ, ಈ ನ್ಯಾಯಾಲಯವು ಆಪಾದಿತನ ವಿರುದ್ಧ ನೋಟೀಸನ್ನು ನೀಡಿದ್ದು, ಆಪಾದಿತನು ಹಾಜರಾಗಿ, ಆಕ್ಷೇಪಣಾ ಹೇಳಿಕೆಯನ್ನು ಸಲ್ಲಿಸಿರುತ್ತಾನೆ.ಆಕ್ಷೇಪಣೆಯ ಹೇಳಿಕೆಯಲ್ಲಿ, ದೂರುದಾರನು, ಆಪಾದಿತನು ಮೇಲೆ ಹೇಳಿದ ಆದೇಶಗಳ ಯಾವುದೇ ಉಲ್ಲಂಘನೆ ಮಾಡಿದ್ದಾನೆಂದು ಭಾವಿಸಿದಲ್ಲಿ, ಅವನು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 2 ಎ ಅಡಿಯಲ್ಲಿ ಮಾನ್ಯ ಏಕ-ಸದಸ್ಯ ಪೀಠ ನ್ಯಾಯಾಧೀಶರ ಮುಂದೆ ಉಲ್ಲಂಘನಾ ಆದೇಶಗಳಿಗೆ ಸಂಬಂಧಿಸಿದಂತೆ ಮುಂದುವರೆಯಬೇಕಾಗುತ್ತದೆಂದೂ ಹಾಗೂ ನಿಂದನೆಗೆ ಸಂಬಂಧಿಸಿದಂತೆ ಪ್ರಸ್ತುತ ಫಿರ್ಯಾದು ಸಮರ್ಥನೀಯವೇ ಆಗಿಲ್ಲವೆಂದು ಆಪಾದಿತನು, ವಾದಿಸಿರುತ್ತಾನೆ.ಈ ನ್ಯಾಯಾಲಯದ ಆದೇಶಗಳ ಆಪಾದಿತ ಉಲ್ಲಂಘನೆಯ ಸಂಬಂಧದಲ್ಲಿ ಯಾವುದೇ ಪರ್ಯಾಯ ಪರಿಹಾರವಿದ್ದಾಗ, ನಿಂದನಾ ಅರ್ಜಿ ಸಮರ್ಥನೀಯವಾಗಿರುವುದಿಲ್ಲ.ಹಾಗಾಗಿ, ಇದನ್ನು ವಜಾಗೊಳಿಸಬೇಕಾಗಿದೆ.

5. ಮುಂದುವರೆದು,ದಿನಾಂಕ: 24.07.2017 ರಂದು ದೂರುದಾರನು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39, ನಿಯಮ 2 ಎ ಅಡಿಯಲ್ಲಿ ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರ ಮುಂದೆ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯು ಪರಿಗಣನೆಗಾಗಿ ಇತ್ಯರ್ಥದಲ್ಲಿದೆಯೆಂದೂ ಸಹ ವಾದಿಸಿರುತ್ತಾನೆ.ಆತನು, ಆಪಾದಿತನ ವಿರುದ್ಧ ಯುಕ್ತ ಕ್ರಮವನ್ನು ಕೈಗೊಳ್ಳುವಂತೆ ಕೋರಿ ಮಾನ್ಯ ಏಕ-ಸದಸ್ಯ ಪೀಠದ ನ್ಯಾಯಾಧೀಶರ ಬಳಿ ಈಗಾಗಲೇ ಮನವಿ ಮಾಡಿಕೊಂಡಿರುವಾಗ, ನಿಂದನಾ ಅರ್ಜಿಯು ಸಮರ್ಥನೀಯವಾಗುವುದಿಲ್ಲ.ದೂರುದಾರನು ಅರ್ಜಿಯನ್ನು ಹಿ ಂ ಪಡೆಯಲು ಈಗಾಗಲೇ ಮನವಿ ಮಾಡಲಾಗಿದೆಯೆಂದು ಹೇಳಲಾಗಿದ್ದರೂ, ಆಪಾದಿತನ ವಿರುದ್ಧ ನಿಂದನೆಗೆ ಸಂಬಂಧಿಸಿದಂತೆ ಕ್ರಮ ತೆಗೆದುಕೊಳ್ಳುವಂತೆ ಆತುರಾತುರವಾಗಿ ಈ ನ್ಯಾಯಾಲಯವನ್ನು ಸಂಪರ್ಕಿಸಿದ್ದು ಮಾನ್ಯ ಏಕ-ಸದಸ್ಯ ಪೀಠದ ನ್ಯಾಯಾಧೀಶರು ಯಾವುದೇ ಆದೇಶವನ್ನು ಹೊರಡಿಸಿಲ್ಲ.ಇದು ಆತುರದ ಕ್ರಮವಾಗಿರುವುದರಿಂದ ಇದನ್ನು ವಜಾಗೊಳಿಸುವುದು ಯುಕ್ತವಾಗಿರುತ್ತದೆ.

6. ಅಲ್ಲದೆ,ದಿನಾಂಕ: 04.10.2017 ರಂದು ಆತ ಈ ನ್ಯಾಯಾಲಯವು ನೀಡಿದ್ದ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ತೆರವುಗೊಳಿಸಬೇಕೆಂದು ಕೋರಿ ಮಾನ್ಯ ಏಕಸದಸ್ಯ ಪೀಠಕ್ಕೆ ಮನವಿ ಸಲ್ಲಿಸಿದ್ದನೆಂದು ಮತ್ತು ಸದರಿ ಅರ್ಜಿಯು ಪರಿಗಣನೆಗೆ ಬಾಕಿಯಿದೆ ಎಂದು ವಾದಿಸಲಾಗಿದೆ.ಅಲ್ಲದೆ ದೂರುದಾರನು ಇತ್ಯರ್ಥದಲ್ಲಿರುವ ಅರ್ಜಿಯ ಸದರಿ ವಿಷಯವನ್ನು ಪ್ರಸ್ತಾಪಿಸಿದೆ, ಅದಕ್ಕೆ ತನ್ನ ಆಕ್ಷೇಪಣೆಗಳನ್ನು ಸಲ್ಲಿಸಿರುವುದರಿಂದ ಹಾಗೂದಿನಾಂಕ: 20.11.2017 ರಂದು ಈ ನಿಂದನಾ ಅರ್ಜಿಯನ್ನು ಉದ್ದೇಶಪೂರ್ವಕವಾಗಿ ಸಲ್ಲಿಸಿರುವುದರಿಂದ ಸದರಿ ವಿಷಯದ ಬಗ್ಗೆ ಅವನಿಗೆ ತಿಳಿದಿದ್ದು, ವಾಸ್ತವಿಕ ಅಂಶವನ್ನು ಮುಚ್ಚಿಟ್ಟಿರುವುದಕ್ಕಾಗಿ ಇದು ಕಾನೂನಿನ ದೃಷ್ಟಿಯಲ್ಲಿ ದೋಷಪೂರ್ಣವಾಗಿರುತ್ತದೆ.ದಿನಾಂಕ: 08.06.2017 ರ ಈ ನ್ಯಾಯಾಲಯದ ಆದೇಶವನ್ನು ಸಂಪೂರ್ಣವಾಗಿ ಉಲ್ಲಂಘಿಸಿ ನಿರ್ಮಾಣ ಚಟುವಟಿಕೆಯನ್ನು ಇನ್ನೂ ನಡೆಸಲಾಗುತ್ತಿದೆ ಎಂಬುದಾಗಿ ದೂರುದಾರನು ಮಾಡಿದ ಆಪಾದನೆಗಳು ಶುದ್ಧ ಸುಳ್ಳಾಗಿದ್ದು, ಇವುಗಳನ್ನು ಸ್ಪಷ್ಟವಾಗಿ ನಿರಾಕರಿಸಲಾಗಿರುತ್ತದೆಂಬುದು ಮತ್ತೊಂದು ವಾದವಾಗಿರುತ್ತದೆ.ಅಲ್ಲದೆ, ದಿನಾಂಕ:08.06.2017 ರಂದಿನ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಎರಡನೇ ಮಹಡಿಯ ಮೇಲೆ ಎಂದರೆ, ಮೂರನೇ ಮಹಡಿಯಲ್ಲಿ ಯಾವುದೇ ನಿರ್ಮಾಣ, ದುರಸ್ತಿ, ಮಾರ್ಪಾಟು, ಬದಲಾವಣೆ ಅಥವಾ ಯಾವುದೇ ಸ್ವರೂಪದ

ನಿರ್ಮಾಣ ಚಟುವಟಿಕೆಗಳನ್ನು [ಎರಡನೇ ಮಹಡಿಯ ಮೇಲೆ ಅಂದರೆ ಮೂರನೇ ಮಹಡಿಯಲ್ಲಿ ಮಾಡುವಂತಿಲ್ಲವೆಂದೂ ನಡೆಸಿಲ್ಲವೆಂದು ಸಹ ವಾದಿಸಲಾಗಿದೆ.ಆದಾಗ್ಯೂ, ಕಟ್ಟಡದ ಮೊದಲ ಹಾಗೂ ಎರಡನೇ ಮಹಡಿಗಳಲ್ಲಿ ಕೆಲವು ನವೀಕರಣ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.ದೂರುದಾರನಿಗೆ ಆ ವಿಷಯ ತಿಳಿದಿದ್ದಾಗ್ಯೂ ಸಹ ಆಪಾದಿತನುದಿನಾಂಕ: 08.06.2017 ರ ಆದೇಶವನ್ನು ಉಲ್ಲಂಘಿಸುವ ಮೂಲಕ ಮೂರನೇ ಮಹಡಿಯಲ್ಲಿ ನಿರ್ಮಾಣ ಚಟುವಟಿಕೆಗಳನ್ನು ಈಗಲೂ ನಡೆಸುತ್ತಿದ್ದಾನೆಂದು ವಾದಿಸಲು ಮಿಥ್ಯಾ ಸೃಷ್ಟಿತ ಛಾಯಾಚಿತ್ರಗಳನ್ನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿರುತ್ತಾನೆ.ಇದನ್ನು ಆಪಾದಿತನಿಗೆ ಕಿರುಕುಳ ನೀಡಲೆಂದೇ ಮಾಡಲಾಗಿದೆ.ಹಾಗಾಗಿ ನಿಂದನಾ ಅರ್ಜಿಯನ್ನು ವಜಾಗೊಳಿಸುವಂತೆ ಈ ನ್ಯಾಯಾಲಯವನ್ನು ಕೋರಿದೆ.

7. ಈ ನ್ಯಾಯಾಲಯವು, ದೂರಿನ ಒಳಾಂಶಗಳನ್ನು ಹಾಗೂ ಆಪಾದಿತನ ಆಕ್ಷೇಪಣಾ ಹೇಳಿಕೆಯನ್ನು ಪರಿಗಣಿಸಿದ ತರುವಾಯ, ಆರೋಪವನ್ನು ರೂಪಿಸಲು ವಸ್ತು ವಿಷಯಗಳು ಕಂಡುಬಂದುದರಿಂದ ಆರೋಪವನ್ನು ರೂಪಿಸಲು ಮುಂದುವರೆದಿರುತ್ತದೆ.ತದನುಸಾರವಾಗಿ ಆರೋಪವನ್ನು ರೂಪಿಸಲಾಯಿತು.ಆಪಾದಿತನು ಆರೋಪವನ್ನು ನಿರಾಕರಿಸಿದ್ದು, ಆತನ ವಾದವನ್ನು ದಾಖಲಿಸಲಾಯಿತು.

8. ದೂರಿನ ಒಳಾಂಶಗಳನ್ನು ರುಜುವಾತುಪಡಿಸುವ ದೃಷ್ಟಿಯಲ್ಲಿ ದೂರುದಾರನು, ಸಿ.ಡಬ್ಲ್ಯು.ಎಂದು ಸ್ವತಃ ವಿಚಾರಣೆಗೊಳಗಾಗಿದ್ದು, ನಿಶಾನೆ.ಪಿ .1 ರಿಂದ 19 ರ ವರೆಗಿನ ದಸ್ತಾವೇಜುಗಳನ್ನು ಗುರುತು ಮಾಡಲಾಗಿದೆ.ಆಪಾದಿತನೂ ಸಹ ಸ್ವತಃ ಡಿ.ಡಬ್ಲ್ಯು.ಎಂದು ವಿಚಾರಣೆಗೊಳಗಾಗಿದ್ದು, ನಿಶಾನೆ ಡಿ .1 ರಿಂದ 7 ರ ವರೆಗಿನ ದಸ್ತಾವೇಜುಗಳನ್ನು ಗುರುತುಮಾಡಲಾಗಿದೆ.ಸಾಕ್ಷ್ಯಗಳ ಮುಕ್ತಾಯದ ತರುವಾಯ ಈ ನ್ಯಾಯಾಲಯವು, ಸಂಬಂಧಪಟ್ಟ ನ್ಯಾಯವಾದಿಗಳ ವಾದಗಳನ್ನು ಆಲಿಸಿತು.

9. ದೂರುದಾರನ ಪರ ಮಾನ್ಯ ನ್ಯಾಯವಾದಿಯು ತನ್ನ ವಾದದಲ್ಲಿ,ದಿನಾಂಕ: 08.06.2017 ರ ಆದೇಶದಲ್ಲಿ, ಹಿಂದೆ ನೀಡಿದ್ದ ಯಥಾಸ್ಥಿತಿಯ ಮಧ್ಯಂತರ ಆದೇಶವನ್ನು ವಿಸ್ತರಿಸುವಾಗ, ಈ ನ್ಯಾಯಾಲಯವು, 2016 ರ ಎಂಎಫ್ಎಸಂಖ್ಯೆ: 7719 ರಲ್ಲಿನ ಅಪೀಲುದಾರರು ಅಂದರೆ ಇದರಲ್ಲಿನ ಆಪಾದಿತನು ವಿಚಾರಣೆಯ ಮುಂದಿನ ದಿನಾಂಕದವರೆಗೆ ಎರಡನೇ ಮಹಡಿಯ ಮೇಲೆ ಎಂದರೆ ಮೂರನೇ ಮಹಡಿಯಲ್ಲಿ ಯಾವುದೇ ಮಾರ್ಪಾಟು, ಬದಲಾವಣೆ, ದುರಸ್ಥಿ ಅಥವಾ ಅನ್ಯಥಾ ಇತರೆ ರೀತಿಯ ನಿರ್ಮಾಣ ಕಾರ್ಯಗಳನ್ನು ಮುಂದುವರೆಸತಕ್ಕದ್ದಲ್ಲವೆಂದು ಸ್ಪಷ್ಟಪಡಿಸಿದೆ ಎಂದು ಬಲವಾಗಿ ವಾದಿಸಿರುತ್ತಾರೆ.ಈ ನ್ಯಾಯಾಲಯದ ನಿರ್ದಿಷ್ಟ ಆದೇಶವಿದ್ದಾಗ್ಯೂ, ಆಪಾದಿತನು ನಿರ್ಮಾಣ ಕಾಮಗಾರಿಯನ್ನು ಮುಂದುವರೆಸಿದ್ದಾನೆ.ನಿಶಾನೆ ಪಿ .5 ರಿಂದ 9 ರ ವರೆಗಿನ ಛಾಯಾಚಿತ್ರಗಳು ಆಪಾದಿತನು ನಿರ್ಮಾಣ ಕಾರ್ಯವನ್ನು ಮುಂದುವರೆಸಿದ್ದಾನೆಂಬುದನ್ನು ಸ್ಪಷ್ಟವಾಗಿ ದೃಢಪಡಿಸುತ್ತದೆ.ಹಾಗಾಗಿ, ಆಪಾದಿತನು ಈ ನ್ಯಾಯಾಲಯದ ಆದೇಶವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿರುತ್ತಾನೆ.

10. ಆಕೆಯ ವಾದಗಳಿಗೆ ಪೂರಕವಾಗಿ, ಮಾನ್ಯ ನ್ಯಾಯವಾದಿಗಳು, ಪಟೇಲ್ ರಜನಿಕಾಂತ್ ಧುಲಾಬಾಯಿ ಹಾಗೂ ಮತ್ತೊಬ್ಬರು ವಿರುದ್ಧ ಪಟೇಲ್ ಚಂದ್ರಕಾಂತ್ ಧುಲಾಬಾಯಿ ಹಾಗೂ ಇತರರು ' ಮೊಕದ್ದಮೆಯಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿರುತ್ತಾರೆ.ಅದರಲ್ಲಿ ಶಿಕ್ಷೆಯ ವ್ಯಾಪ್ತಿಗೆ ಸಂಬಂಧಪಟ್ಟಮಟ್ಟಿಗೆ ಸರ್ವೋಚ್ಚ ನ್ಯಾಯಾಲಯವು, ದಂಡನೆಯು ಮಿತವಾಗಿ ಚ ತೆಗೆದುಕೊಳ್ಳಬೇಕಾದ ಕಟ್ಟುನಿಟ್ಟಿನ ಕ್ರಮವೆಂದು ಅಭಿಪ್ರಾಯಪಟ್ಟಿರುತ್ತದೆಂದು ವಾದಿಸಿರುತ್ತಾರೆ.ಆದಾಗ್ಯೂ, ತಮ್ಮ ಘನತೆ ಹಾಗೂ

ಕಾನೂನಿನ ಗಾಂಭೀರ್ಯವನ್ನು ಕಾಪಾಡುವುದು ನ್ಯಾಯಾಲಯಗಳ ಕರ್ತವ್ಯವಾಗಿರುತ್ತದೆ.ಹಾಗಾಗಿ, ನ್ಯಾಯಾಲಯಗಳು, ನ್ಯಾಯಾಡಳಿತದ ಹಿತಾಸಕ್ತಿಗೆ ಹಾಗೂ ನ್ಯಾಯಾಲಯಗಳ ಆದೇಶಗಳ ಅನುಪಾಲನೆಗೆ ಅಗತ್ಯವಾಗಿದೆ ಎನಿಸಿದರೆ, ದಂಡನೆಯ ಅಧಿಕಾರವನ್ನು ಚಲಾಯಿಸಲು ಹಿಂಜರಿಯಬಾರದು.ನ್ಯಾಯವಾದಿಗಳು ಈ ತೀರ್ಪನ್ನು ಉಲ್ಲೇಖಿಸಿ, ಆಪಾದಿತನು ಈ ನ್ಯಾಯಾಲಯದ ಆದೇಶವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿರುವುದರಿಂದ, ಪ್ರಸ್ತುತ ಪ್ರಕರಣಕ್ಕೆ ಈ ತೀರ್ಪು ಯುಕ್ತವಾಗಿ ಅನ್ವಯವಾಗುತ್ತದೆಂದು ವಾದಿಸಿರುತ್ತಾರೆ.

11. ಇದಕ್ಕೆ ಪ್ರತಿಯಾಗಿ, ಆಪಾದಿತನ ಪರ ಮಾನ್ಯ ವಕೀಲರು, ಆಪಾದಿತನು ಯಾವುದೇ ಆದೇಶವನ್ನು ಉಲ್ಲಂಘಿಸಿರುವುದಿಲ್ಲವೆಂದು ವಾದಿಸಿರುತ್ತಾರೆ.ದೂರುದಾರನು ಹಾಜರುಪಡಿಸಿರುವಂಥ ಛಾಯಾಚಿತ್ರಗಳು ಕಟ್ಟಡದ ಒಳಗಿನವಾಗಿದ್ದು, ದೂರುದಾರನು, ತನ್ನ ದೂರಿನಲ್ಲಿ ಉಲ್ಲಂಘನೆಯಾಗಿರುವುದು ತನಗೆ ಯಾವಾಗ ತಿಳಿದುಬಂದಿತೆಂದು ನಿಖರವಾಗಿ ಹೇಳಿರುವುದಿಲ್ಲ.ನಿರ್ಮಾಣ ಕಾರ್ಯವನ್ನುದಿನಾಂಕ: 08.06.2017 ರ ಆದೇಶವನ್ನು ಹೊರಡಿಸುವ ಮೊದಲೇ ಪೂರ್ಣಗೊಳಿಸಲಾಗಿತ್ತು.ಛಾಯಾಚಿತ್ರಗಳಲ್ಲಿ ದಿನಾಂಕಗಳನ್ನು ತಿರುಚಿರುತ್ತಾರೆ.ಆಪಾದಿತರು ನಿಶಾನೆ ಡಿ .4 ಹಾಗೂ 5 ನ್ನು ಉದಾಹರಿಸಿದ್ದು, ಅವು ಕಾಮಗಾರಿಯು ಪೂರ್ಣಗೊಂಡಿರುವುದನ್ನು ತೋರಿಸುತ್ತವೆ ಮತ್ತು ಡಿ.ಡಬ್ಲ್ಯುರ ಪಾಟೀ ಸವಾಲಿನಲ್ಲಿ ಅದರ ಬಗ್ಗೆ ಯಾವುದೇ ತಕರಾರು ಮಾಡಿರುವುದಿಲ್ಲ.

12. ದೂರುದಾರನಿಗೆ ಮುಕ್ತವಾಗಿದ್ದ ಕ್ರಮವು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39, ನಿಯಮ 2 ಎ ಅಡಿಯದಾಗಿದೆ ವಿನಾ, ನಿಂದನಾ ನಡಾವಳಿಯದಾಗಿರುವುದಿಲ್ಲವೆಂಬುದೂ ಆಪಾದಿತರ ಪರ ನ್ಯಾಯವಾದಿಗಳ ಮತ್ತೊಂದು ವಾದವಾಗಿರುತ್ತದೆ.ಆದೇಶವನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39, ನಿಯಮ 1 ಹಾಗೂ 2 ರಡಿಯಲ್ಲಿ ಸಲ್ಲಿಸಿದ ಅರ್ಜಿಗಳನ್ನಾಧರಿಸಿ ಹೊರಡಿಸಲಾಗಿದೆ.ಸಂದರ್ಭಗಳು ಹಾಗಿರುವಾಗ, ನಿಂದನಾ ಅರ್ಜಿಯು ಸಮರ್ಥನೀಯವಾಗಿಲ್ಲ.ಅಲ್ಲದೆ ನ್ಯಾಯವಾದಿಗಳು, ದೂರುದಾರನು ಹಾಜರುಪಡಿಸಿರುವ ಛಾಯಾಚಿತ್ರಗಳನ್ನು ಭಾರತ ಸಾಕ್ಷ್ಯ ಎ ಅಧಿನಿಯಮ, 1872 ರ 65 ಬಿ ಪ್ರಕರಣದಡಿಯಲ್ಲಿನ ಅನುಪಾಲನೆಯಾಗಿಲ್ಲದಿರುವುದರಿಂದ ಅವುಗಳನ್ನು ಪರಿಗಣಿಸಬಾರದೆಂದೂ ಸಹ ವಾದಿಸಿರುತ್ತಾರೆ.

13. ಆಪಾದಿತರ ಪರ ಮಾನ್ಯ ನ್ಯಾಯವಾದಿಗಳು ತಮ್ಮ ವಾದಗಳಿಗೆ ಪೂರಕವಾಗಿ ಟಿ.ಸಿ. ಗುಪ್ತ ವಿರುದ್ಧ ಬಿಮಲ್ ಕುಮಾರ್ ದತ್ತ ಹಾಗೂ ಇತರರು ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿ, ನಿಂದನಾ ವ್ಯಾಪ್ತಿಯನ್ನು ಕೋರುವ ಸಲುವಾಗಿ, ಅದರಲ್ಲೂ ಉದ್ದೇಶಪೂರ್ವಕ ಅವಿಧೇಯತೆಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವುದು ತುಂಬಾ ಅವಶ್ಯಕವಾಗಿರುತ್ತದೆಂದೂ ವಾದಿಸಿರುತ್ತಾರೆ.ಈ ತೀರ್ಪನ್ನು ಉದಾಹರಿಸಿ, ಸರ್ವೋಚ್ಚ ನ್ಯಾಯಾಲಯವು, ನಿಂದನಾ ಕ್ರಮವು ಅರೆ ದಂಡನೀಯ ನಡಾವಳಿಗಳ ಸ್ವರೂಪದಲ್ಲಿರುವುದರಿಂದ, ಒಬ್ಬ ವ್ಯಕ್ತಿಯನ್ನು ನಿಂದನೆ ಮಾಡಿರುವ ತಪ್ಪಿತಸ್ಥನೆಂದು ಅಭಿಪ್ರಾಯಪಡಲು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವ ಮಾಪನವು ಸಕಾರಣಿಕ ಸಂದೇಹವನ್ನು ಮೀರಬೇಕೆಂದು ಅಭಿಪ್ರಾಯಪಟ್ಟಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ.ಅಲ್ಲದೆ, ಆಪಾದಿತನನ್ನು ನಿಂದನೆ ಮಾಡಿರುವ ತಪ್ಪಿತಸ್ಥನೆಂದು ಅಭಿಪ್ರಾಯಪಡಲು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡುವ ಅಂಥ ಯಾವುದೇ ಮಾಪನವಿರುವುದಿಲ್ಲವೆಂದು ಹಾಗೂ ದೂರುದಾರನು ಸಕಾರಣಿಕ

ಸಂದೇಹವನ್ನು ಮೀರಿ ರುಜುವಾತುಪಡಿಸಿರುವುದಿಲ್ಲವೆಂದೂ ವಾದಿಸಿರುತ್ತಾನೆ.ಹಾಗಾಗಿ, ಆಪಾದಿತನ ವಿರುದ್ಧ ನಿಂದನಾ ನಡಾವಳಿಗಳನ್ನು ಸಮರ್ಥನೀಯಗೊಳಿಸಲಾಗುವುದಿಲ್ಲ.

14. ಮಾನ್ಯ ನ್ಯಾಯವಾದಿಗಳು, ಎಚ್. ಗೋವಿಂದರಾಜು -ವಿರುದ್ಧ-ಶಂಕರ ಅಂಗೇಗೌಡ ಹಾಗೂ ಇತರರು ಪ್ರಕರಣದಲ್ಲಿ ಈ ನ್ಯಾಯಾಲಯದ ತೀರ್ಪನ್ನು ಉದಾಹರಿಸಿ, ನಿಂದನಾ ಅರ್ಜಿಯನ್ನು ಹೂಡಲು, ಒಬ್ಬ ವ್ಯಕ್ತಿಯನ್ನು ದಂಡಿಸುವುದಕ್ಕೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39, ನಿಯಮ 2 ಎ ರಡಿಯಲ್ಲಿನ ಸಮರ್ಥ ಪರಿಹಾರದ ಲಭ್ಯತೆಯು ತುಂಬಾ ವಿಸ್ತೃತವಾಗಿದೆಯೆಂದು ವಾದಿಸಿರುತ್ತಾರೆ.ಪರ್ಯಾಯ ಪರಿಹಾರ ಲಭ್ಯವಿರುವಾಗ ಉಚ್ಚ ನ್ಯಾಯಾಲಯವು ತನ್ನ ನಿಂದನಾ ವ್ಯಾಪ್ತಿಯನ್ನು ಒಳಗೊಳ್ಳುವಂತಿಲ್ಲ.ಒಮ್ಮೆ ಸಿವಿಲ್ ಪ್ರಕ್ರಿಯಾ ಸಂಹಿತೆಯಡಿಯಲ್ಲಿನ ಅಧಿಕಾರವ್ಯಾಪ್ತಿಯನ್ನು ಅನ್ವಯಿಸಿ, ಮತ್ತೊಂದೆಡೆ ನಿಂದನಾ ಅಧಿನಿಯಮದ ಉಪಬಂಧಗಳನ್ನು ಅನ್ವಯಿಸುವ ಅವಕಾಶ ಲಭ್ಯವಾಗುವುದಿಲ್ಲ.ಹಾಗಾಗಿ, ಈ ನ್ಯಾಯಾಲಯವು ನಿಂದನಾ ಅರ್ಜಿಯನ್ನು ವಜಾಗೊಳಿಸಬೇಕಾಗಿರುತ್ತದೆ.

15. ಅಲ್ಲದೆ, ಮಾನ್ಯ ನ್ಯಾಯವಾದಿಗಳು ಅನ್ವರ್ ಪಿ.ವಿ. -ವಿರುದ್ಧ ಪಿ.ಕೆ. ಬಷೀರ್ ಮತ್ತು ಇತರರು ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿ, ಭಾರತ ಸಾಕ್ಷ್ಯ ಎಂ ಅಧಿನಿಯಮದ 65 (ಬಿ) ( 4) ನೇ ಪ್ರಕರಣದಡಿಯಲ್ಲಿನ ಪ್ರಮಾಣಪತ್ರವು ಆಜ್ಞಾಪಕವಾಗಿದ್ದು, ಅಂಥ ಪ್ರಮಾಣಪತ್ರವು ವಿದ್ಯುನ್ಮಾನ ದಾಖಲೆಗಳ ಜೊತೆ ಇರಬೇಕೆಂದು ವಾದಿಸಿರುತ್ತಾರೆ.ಅವುಗಳನ್ನು ಹಾಜರುಪಡಿಸಿದಾಗ, ಅಂಥ ಪ್ರಮಾಣಪತ್ರಗಳು ಇಲ್ಲದಿರುವಲ್ಲಿ, ವಿದ್ಯುನ್ಮಾನ ದಾಖಲೆಗಳ ಪರೋಕ್ಷ ಸಾಕ್ಷ್ಯವನ್ನು ಸಾಕ್ಷ್ಯದಲ್ಲಿ ಒಪ್ಪಿಕೊಳ್ಳಲಾಗುವುದಿಲ್ಲ.

16. ದೂರುದಾರ ಹಾಗೂ ಆಪಾದಿತರ ಪರ ನ್ಯಾಯವಾದಿಗಳ ವಾದಗಳನ್ನು ಆಲಿಸಿದಾಗ, ನಮ್ಮ ಪರಿಗಣನೆಗೆ ಸಂಬಂಧಿಸಿದಂತೆ ಉದ್ಭವಿಸಿದ ವಿವಾದಾಂಶಗಳು ಈ ಮುಂದಿನಂತಿರುತ್ತವೆ:

(1) ಆಪಾದಿತನುದಿನಾಂಕ: 08.06.2017 ರ ಈ ನ್ಯಾಯಾಲಯದ ಆದೇಶವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿದ್ದನೆ?ಮತ್ತು ಆ ಮೂಲಕ ನ್ಯಾಯಾಲಯ ನಿಂದನಾ ಅಧಿನಿಯಮ, 1971 ರ 12 ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿರುವನೇ?

(ii) ಯಾವ ಆದೇಶ?

ವಿವಾದಾಂಶ ( i) ಹಾಗೂ(ii):

17. ಸಂಕ್ಷಿಪ್ತವಾಗಿ ದೂರುದಾರನ ವಾದವು ಈ ಮುಂದಿನಂತಿರುತ್ತದೆ:ಈ ನ್ಯಾಯಾಲಯವು ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಲು ಮಧ್ಯಂತರ ಆದೇಶವನ್ನು ಹೊರಡಿಸಿದ್ದು, ತರುವಾಯ ಮಧ್ಯಂತರ ಆದೇಶವನ್ನು ವಿಸ್ತರಿಸುವಾಗ ಮುಂದಿನ ದಿನಾಂಕದ ವಿಚಾರಣೆಯವರೆಗೆ ಎರಡನೇ ಮಹಡಿಯ ಛಾವಣಿ ಮೇಲೆ ಅಂದರೆ ಮೂರನೇ ಮಹಡಿಯಲ್ಲಿ ಯಾವುದೇ ಮಾರ್ಪಾಟು, ಬದಲಾವಣೆ ದುರಸ್ಥಿ ಅಥವಾ ಅನ್ಯಥಾ ಯಾವುದೇ ಪಾಯ ನಿರ್ಮಾಣ ಕಾರ್ಯವನ್ನು ಮಾಡಲು ಮುಂದಾಗಬಾರದೆಂದು ಆಪಾದಿತನಿಗೆ ನಿರ್ದಿಷ್ಟವಾಗಿ ನಿರ್ದೇಶಿಸಲಾಗಿರುತ್ತದೆ.ದೂರುದಾರನು ತನ್ನ ವಾದವನ್ನು ಪುಷ್ಟೀಕರಿಸುವ ಸಲುವಾಗಿ, ಸ್ವತಃ ಸಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಒಳಪಟ್ಟಿರುತ್ತಾನೆ.ದೂರುದಾರನು ತನ್ನ ಸಾಕ್ಷ್ಯದಲ್ಲಿ ಮುಖ್ಯ ವಿಚಾರಣೆಗೆ ಬದಲಾಗಿ ಅಫಿಡಾವಿಟ್ಟಿನ ನಮೂನೆಯಲ್ಲಿ ದೂರಿನ ದೃಢಕ್ತಿಗಳ ಅಂಶಗಳನ್ನು ಹಾಗೂದಿನಾಂಕ: 8.6.2017 ರಂದಿನ

ಆದೇಶದ ಮೇರೆಗೆ ಎಂ.ಎಫ್.ಎ.ದಲ್ಲಿ ಹೊರಡಿಸಿದ ನ್ಯಾಯಾಲಯದ ಆದೇಶವನ್ನು ಸಹ ಪುನರುಚ್ಚರಿಸಿದ್ದಾನೆ ಹಾಗೂ ಅಫಿಡಾವಿಟ್ಟಿನಲ್ಲಿ ಆಕ್ಷೇಪಣೆಯ ಹೇಳಿಕೆಯ 7 ನೇ ಪ್ಯಾರಾವನ್ನು ಉದ್ಧರಿಸಿರುತ್ತಾನೆ.ದೂರುದಾರನನ್ನು ನಿಶಾನೆ ಪಿ .2 ಎಂದು ಗುರುತಿಸಲಾದ ಅಫಿಡಾವಿಟ್ಟಿನೊಂದಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39, ನಿಯಮ 1 ಹಾಗೂ 2 ರಡಿಯಲ್ಲಿ ದೂರುದಾರರು ದಾವೆಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಸಂಖ್ಯೆ: 2 ಎಂದು ಗುರುತು ಮಾಡಲಾಗಿದೆ.ಮೂಲ ದಾವೆಯಲ್ಲಿ ಹೊರಡಿಸಿದದಿನಾಂಕ: 22.08.2016 ರ ಆದೇಶದ ಪ್ರಮಾಣೀಕೃತ ಪ್ರತಿಯನ್ನು ನಿಶಾನೆ ಪಿ .3 ಎಂದು ಗುರುತಿಸಲಾಗಿದೆ.ಯಾವುದೇ ನಿರ್ಮಾಣ ಚಟುವಟಿಕೆಗಳನ್ನು ನಡೆಸಬಾರದೆಂದು ಆಪಾದಿತನಿಗೆ ನಿರ್ದೇಶಿಸುವ ಈ ನ್ಯಾಯಾಲಯದ ಆದೇಶದ ಪ್ರಮಾಣಿತ ಪ್ರತಿಯನ್ನು ನಿಶಾನೆ ಪಿ .4 ಎಂದು ಗುರುತಿಸಲಾಗಿರುತ್ತದೆ.ಆಪಾದಿತನು ನಡೆಸುತ್ತಿರುವ ನಿರ್ಮಾಣ ಕಾರ್ಯಗಳನ್ನು ತೋರಿಸುವಂಥ ಛಾಯಾಚಿತ್ರಗಳನ್ನು ನಿಶಾನೆ ಪಿ .5 ರಿಂದ 9 ಎಂದು ಗುರುತು ಮಾಡಲಾಗಿರುತ್ತದೆ.ಸದರಿ ಛಾಯಾಚಿತ್ರಗಳನ್ನು ಒಳಗೊಂಡಂಥ ಸಿ.ಡಿಯನ್ನು ನಿಶಾನೆ ಪಿ .10 ಎಂದು ಗುರುತು ಮಾಡಲಾಗಿದೆ.ಪ್ರಸಕ್ತ ಅರ್ಜಿಯನ್ನು ಸಲ್ಲಿಸಿದ ತರುವಾಯ ಕೂಡ ನಿರ್ಮಾಣ ಕಾರ್ಯವನ್ನು ನಡೆಸುತ್ತಿದ್ದನೆಂಬುದನ್ನು ತೋರಿಸುವ ದೃಷ್ಟಿಯಿಂದ ನಿಶಾನೆ ಪಿ .12 ರಿಂದ 17 ಎಂದು ಗುರುತು ಮಾಡಿರುವ ಛಾಯಾಚಿತ್ರಗಳನ್ನು ಸಹ ದೂರುದಾರನು ಹಾಜರುಪಡಿಸಿರುತ್ತಾನೆ.ದೂರುದಾರನು ಪಾಟೀ ಸವಾಲಿಗೆ ಒಳಪಟ್ಟಿದ್ದ.

18. ಪಾಟೀ ಸವಾಲಿನಲ್ಲಿ, ಆಪಾದಿತನು ಆವರಣದ ಎರಡನೇ ಮಹಡಿಯನ್ನು ಖರೀದಿಸಿರುತ್ತಾನೆಂದು ಸೂಚಿಸಲಾಗಿದ್ದು, ಆದರೆ ಆತ ಈ ಸೂಚನೆಯನ್ನು ನಿರಾಕರಿಸಿದ್ದರೂ, ಮೆ || ಕೊಠಾರಿ ಅಸೋಸಿಯೇಟ್ಸ್ ರವರು ಎರಡನೇ ಮಹಡಿಯ ಭಾಗವಾಗಿರುವಂಥ ಹೊಚ್ಚಡದ ಜಾಗವನ್ನು ಮಾತ್ರ ಖರೀದಿಸಿರುತ್ತಾರೆಂಬುದನ್ನು ಒಪ್ಪಿಕೊಂಡಿರುತ್ತಾನೆ.ಉಳಿದ ಜಾಗವು ತೆರೆದ ಮೇಲ್ಛಾವಣಿ ಪ್ರದೇಶವಾಗಿರುತ್ತದೆ.ಕ್ರಯಪತ್ರದಿಂದ ಮೆ || ಕೊಠಾರಿ ಅಸೋಸಿಯೇಟ್ಸ್ ರವರು ಅನುಸೂಚಿ-ಸಿ ಯ ಯ 1 ನೇ ಖಂಡದ ನಿರ್ಬಂಧನೆಗಳ ಪ್ರಕಾರ ನಿರ್ಮಾಣ ಮಾಡುವ ಹಕ್ಕನ್ನು ಹೊಂದಿರುತ್ತದೆಂಬ ಅಂಶಕ್ಕೆ ಸಂಬಂಧಿಸಿದ ಒಂದು ಖಂಡವಿರುತ್ತದೆಂಬ ಸಂಗತಿ ತಿಳಿದುಬರುತ್ತದೆ.ಆಪಾದಿತನು ಸ್ಟೀಲ್ ಪಿಲ್ಲರ್‌ಗಳು, ಕಾಲಂಗಳು ಮುಂತಾದವುಗಳನ್ನು ನಿಲ್ಲಿಸಿದ್ದನೆಂದು ಹಾಗೂ ಅದರ ಮೇಲೆ ಕ್ಲಾಬ್ಬಳನ್ನು ನಿರ್ಮಿಸಿರುತ್ತಾನೆಂಬುದು ತಿಳಿದುಬರುತ್ತದೆ.ಆಪಾದಿತನು ಯಾವುದೇ ರೀತಿಯ ಸಿಮೆಂಟ್ ಮೇಲ್ಛಾವಣಿಯನ್ನು ನಿರ್ಮಿಸಿರಲಿಲ್ಲವೆಂದು ಸೂಚಿಸಲಾಗಿದ್ದು, ಇದನ್ನು ನಿರಾಕರಿಸಲಾಗಿರುತ್ತದೆ.ಛಾಯಾಚಿತ್ರಗಳಾದಂತಹ ನಿಶಾನೆ ಡಿ .1 ಹಾಗೂ 2 ಗಳನ್ನು ಸಾಕ್ಷ್ಯವಾಗಿ ಮುಂದಿಟ್ಟಿದ್ದು, ಈ ಛಾಯಾಚಿತ್ರಗಳು ಕಟ್ಟಡ ಒಳಗಿನಿಂದ ತೆಗೆದ ಮೇಲ್ಛಾವಣಿಯ ಛಾಯಾಚಿತ್ರಗಳಾಗಿರುತ್ತವೆಂಬುದನ್ನು ಬಹಿರಂಗಪಡಿಸುತ್ತವೆ.ಇಡೀ ನಿರ್ಮಾಣ ಚಟುವಟಿಕೆಯುದಿನಾಂಕ: 08.06.2017 ರಂದು ಸಂಪೂರ್ಣವಾಗಿ ಪೂರ್ಣಗೊಂಡಿರುತ್ತದೆಂದು ಸೂಚಿಸಲಾಗಿದ್ದು, ಅದನ್ನು ನಿರಾಕರಿಸಲಾಗಿರುತ್ತದೆ.ನಿಶಾನೆ ಪಿ .5 ರಿಂದ 9 ರ ವರೆಗಿನ ಹಾಗೂ 12 ರಿಂದ 17 ರ ವರೆಗಿನ ನಿಶಾನೆಗಳ ಮೇರೆಗೆ ಅವನು ಹಾಜರುಪಡಿಸಿದ ಛಾಯಾಚಿತ್ರಗಳು ಈತನ ಅಣ್ಣನ ಮಗನು ತೆಗೆದ ಛಾಯಾಚಿತ್ರಗಳಾಗಿವೆಯೆಂದು ತಿಳಿದುಬರುತ್ತದೆ.ಛಾಯಾಚಿತ್ರಗಳನ್ನು ಡಿಜಿಟಲ್ ಕ್ಯಾಮಾರಾದಿಂದ ತೆಗೆದಿರುವುದೂ ಸಹ ಕಂಡುಬರುತ್ತದೆ.ಛಾಯಾಚಿತ್ರಗಳಲ್ಲಿ ಕಂಡುಬರುವ ದಿನಾಂಕಗಳನ್ನು ಬದಲಾಯಿಸಲಾಗಿರುತ್ತದೆ ಅಥವಾ ಹೊಂದಾಣಿಕೆ ಮಾಡಲಾಗಿರುತ್ತದೆಂದು ಕಂಡು ಬಂದಿದ್ದು, ಅದರ ಬಗ್ಗೆ ತನಗೇನೂ ತಿಳಿದಿಲ್ಲವೆಂದು ಸದರಿ ವಿಚಾರವನ್ನು ನಿರಾಕರಿಸಿರುತ್ತಾನೆ.ಮೇಲೆ ಹೇಳಿದ ಛಾಯಾಚಿತ್ರಗಳನ್ನುದಿನಾಂಕ: 8.6.2017 ಕ್ಕಿಂತ ತುಂಬಾ

ಮೊದಲೇ ತೆಗೆದುಕೊಳ್ಳಲಾಗಿತ್ತೆಂದು ಸೂಚಿಸಲಾಗಿದ್ದು, ಅದನ್ನು ನಿರಾಕರಿಸಲಾಗಿರುತ್ತದೆ.ಛಾಯಾಚಿತ್ರಗಳನ್ನು ವೃತ್ತಿಪರ ಏಜೆನ್ಸಿಯ ಮೂಲಕ ಆತನ ಅಣ್ಣನ ಮಗ ವಿನ್ಯಾಸಗೊಳಿಸಿದ್ದಾನೆಂದು ತಿಳಿದುಬರುತ್ತದೆ.

19. ಆಪಾದಿತನನ್ನು ಡಿ.ಡಬ್ಲ್ಯು.ಎಂದು ವಿಚಾರಣೆ ಮಾಡಲಾಗಿದೆ.ಆಪಾದಿತನು ತನ್ನ ಮುಖ್ಯ ವಿಚಾರಣೆಗೆ ಬದಲಾಗಿ ತನ್ನ ಅಫಿಡಾವಿಟ್ಟಿನಲ್ಲಿ ತನ್ನ ಆಕ್ಷೇಪಣಾ ಹೇಳಿಕೆಯ ವಾದಗಳನ್ನು ಪುನರುಚ್ಚರಿಸಿ, ಎರಡನೇ ಮಹಡಿ ಮೇಲ್ಛಾವಣಿ ಪ್ರದೇಶ ಅಂದರೆ ಕಟ್ಟಡದ ಮೂರನೇ ಮಹಡಿ ಮೇಲಿನ ಸ್ಟೀಲ್ ಕಟ್ಟಡವನ್ನು ನಿರ್ಮಿಸುವುದಕ್ಕೆ ಸಂಬಂಧಿಸಿದ ಇಡೀ ಕಾಮಗಾರಿಯನ್ನುದಿನಾಂಕ: 08.06.2017 ಕ್ಕೆ ಮೊದಲೇ ಪೂರ್ಣಗೊಳಿಸಲಾಯಿತೆಂದು ಹಾಗೂ ಇದನ್ನು ನಿಶಾನೆ ಡಿ .1 ಹಾಗೂ 2 ಎಂದು ಗುರುತು ಮಾಡಿರುವ ಛಾಯಾಚಿತ್ರಗಳ ಮೂಲಕ ಸಾಕ್ಷಿಯನ್ನು ನೀಡಬಹುದಾಗಿದೆಯೆಂದೂ ಹೇಳಿರುತ್ತಾನೆ.ಮುಂದುವರೆದು, ಈತ ಈ ನ್ಯಾಯಾಲಯವು ಮಧ್ಯಂತರ ಆದೇಶವನ್ನು ಹೊರಡಿಸಿದ ತರುವಾಯ ಸದರಿ ಕಟ್ಟಡದ ಮೂರನೇ ಮಹಡಿಯ ಮೇಲೆ ಮೆ || ಕೊಠಾರಿ ಅಸೋಸಿಯೇಟ್ಸ್ ಯಾವುದೇ ನಿರ್ಮಾಣವನ್ನು ಕೈಗೊಂಡಿರುವುದಿಲ್ಲವೆಂದು ಹಾಗೂ ಸದರಿ ಆದೇಶವನ್ನು ನಿಂದಿಸುವಂಥ ಯಾವುದೇ ಕೃತ್ಯವನ್ನು ಎಸಗಿರುವುದಿಲ್ಲವೆಂದೂ ಪುನರುಚ್ಚರಿಸಿರುತ್ತಾನೆ.ಮೆ || ಕೊಠಾರಿ ಅಸೋಸಿಯೇಟ್ಸ್ ಈಗಾಗಲೇ ಸದರಿ ಕಟ್ಟಡದಲ್ಲಿ ಈಗಿರುವ ನಿರ್ಮಿತಿಯ ಮೇಲೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿತ್ತು.ಆಪಾದಿತನು ಕ್ರಯಪತ್ರದ ಪ್ರಮಾಣಿತ ಪ್ರತಿಯನ್ನು ನಿಶಾನೆ ಡಿ .3 ಎಂದೂ,ದಿನಾಂಕ: 01.06.2017 ರ ಮೂಲ ದರಪಟ್ಟಿಯನ್ನು ನಿಶಾನೆ ಡಿ .4 ಎಂದೂ, ಮೌಲ್ಯವರ್ಧಿತ ತೆರಿಗೆ ನಮೂನೆ 100 ಅನ್ನು ನಿಶಾನೆ ಡಿ .5 ಎಂದೂ, ಕರ್ನಾಟಕ ಸರ್ಕಾರದ ವೆಬ್ ತಲುಪೊಪ್ಪಿಗೆ ಚೀಟಿಯ ಪ್ರತಿಯನ್ನು ನಿಶಾನೆ ಡಿ .6 ಎಂದೂ, ಹಾಗೂ ಭಾರತ ಸಾಕ್ಷ್ಯ ಎ ಅಧಿನಿಯಮದ 65- ಎ ಹಾಗೂ ಬಿ ಪ್ರಕರಣಗಳಡಿಯಲ್ಲಿನ ಪ್ರಮಾಣಪತ್ರವನ್ನು ನಿಶಾನೆ ಡಿ .7 ಎಂದೂ ಸಹ ಗುರುತಿಸಿರುತ್ತಾನೆ.ಸಾಕ್ಷೀದಾರನನ್ನು ಪಾಟಿ ಸವಾಲಿಗೆ ಒಳಪಡಿಸಲಾಯಿತು.

20. ಪಾಟಿ ಸವಾಲಿನಲ್ಲಿ,ದಿನಾಂಕ: 09.02.2017 ರ ಆದೇಶದ ಮೂಲಕ ನ್ಯಾಯಾಲಯವು ಆತನ ಹಾಗೂ ದೂರುದಾರನ ವಿರುದ್ಧ ಯಥಾಸ್ಥಿತಿ ಆದೇಶವನ್ನು ನೀಡಿತ್ತೆಂಬುದು ತಿಳಿದುಬರುತ್ತದೆ.ಯಥಾಸ್ಥಿತಿ ಆದೇಶವೆಂದರೆ ಸದರಿ ಆದೇಶದ ದಿನಾಂಕದಂದು ಸ್ವತ್ತು ಹೇಗೆ ಎಲ್ಲಿ ಇದೆಯೋ ಹಾಗೆಯೇ ಇಬ್ಬರೂ ಪಕ್ಷಕಾರರು ಸ್ವತ್ತನ್ನು ನಿರ್ವಹಿಸಬೇಕೆಂದಾಗಿರುತ್ತದೆ.ಮುಂದುವರೆದು ಸದರಿ ಮಧ್ಯಂತರ ಆದೇಶವನ್ನುದಿನಾಂಕ: 08.06.2017 ರಂದು ಈ ನ್ಯಾಯಾಲಯವು ವಿಸ್ತರಿಸಿರುತ್ತದೆಂಬುದೂ ತಿಳಿದುಬಂದಿರುತ್ತದೆ.ಆದೇಶವು, ಎರಡನೇ ಮಹಡಿಯ ಮೇಲೆ ಅಂದರೆ ಆವರಣದ ಮೂರನೇ ಮಹಡಿಯಲ್ಲಿ ಯಾವುದೇ ನಿರ್ಮಾಣವನ್ನು ಮಾಡಬಾರದೆಂಬುದನ್ನು ಸೂಚಿಸುತ್ತದೆ.ಮುಂದುವರೆದು, ಈತ ನಿಶಾನೆ ಪಿ .18 ಎಂದು ಗುರುತು ಮಾಡಿದಂಥ ದಿನಾಂಕ 19.01.2018 ರಂದಿನ ತನ್ನ ಪ್ರತಿ ಅಫಿಡಾವಿಟ್ಟಿನಲ್ಲಿ ಆತನು ನೀಡಿರುವ ಹೇಳಿಕೆಗಳಿಗೆ ಬದ್ಧನಾಗಿರುತ್ತಾನೆಂಬುದೂ ತಿಳಿದುಬಂದಿರುತ್ತದೆ.ಆತ ಕಟ್ಟಡದ ಎರಡನೇ ಮಹಡಿ ಹಾಗೂ ಮೂರನೇ ಮಹಡಿಗಳ ಮೇಲೆ ಅನಧಿಕೃತವಾಗಿ ನಿರ್ಮಾಣ ಕಾರ್ಯವನ್ನು ಮಾಡಿರುತ್ತಾನೆಂದು ಸೂಚಿಸಲಾಗಿದ್ದು, ಅದನ್ನು ನಿರಾಕರಿಸಲಾಗಿರುತ್ತದೆ.ಮುಂದುವರೆದು, ನಿಶಾನೆ ಪಿ .5 ರಿಂದ 9 ರವರೆಗೆ ಅಂದರೆದಿನಾಂಕ: 02.09.2017 ಮತ್ತು 14.06.2017 ರ ಛಾಯಾಚಿತ್ರಗಳಿಂದ ಕಂಡುಬರುವಂತೆ ಅವರು ನಿರ್ಮಾಣ ಕಾರ್ಯವನ್ನು ಕೈಗೊಂಡಿರುತ್ತಾರೆಂದು ಸೂಚಿಸಿದ್ದು, ಇದನ್ನು ನಿರಾಕರಿಸಲಾಗಿರುತ್ತದೆ.ಸಾಕ್ಷ್ಯವನ್ನು ನಿಶಾನೆ ಪಿ .19 ಎಂದು ಗುರುತು ಮಾಡಿದ ಛಾಯಾಚಿತ್ರಗಳನ್ನು ತೋರಿಸಲಾಯಿತು.ಸಾಕ್ಷೀದಾರನು, ಛಾಯಾಚಿತ್ರದಲ್ಲಿ ಸಾಕ್ಷ್ಯವಾಗಿರುವಂಥದ್ದು ಲೋಹದ ಹಾಳೆಯ ಮೇಲೆ

ಸಿಮೆಂಟಿನ ವಾಟರ್ ಪ್ರೂಫಿಂಗ್ ಅನ್ನು ನಿರ್ಮಿಸಿರುವುದು ಮಾತ್ರವೇ ಆಗಿರುತ್ತದೆಂದು ಹೇಳಿರುತ್ತಾನೆ.ಆತನು ಈ ನ್ಯಾಯಾಲಯದ ಮಧ್ಯಂತರ ಆದೇಶವನ್ನು ಉಲ್ಲಂಘಿಸಿರುತ್ತಾನೆಂದು ಸೂಚಿಸಿದ್ದು, ಇದನ್ನು ನಿರಾಕರಿಸಲಾಗಿರುತ್ತದೆ.

21. ದೂರುದಾರ ಹಾಗೂ ಆಪಾದಿತರಿಬ್ಬರ ಮೌಖಿಕ ಹಾಗೂ ದಸ್ತಾವೇಜಿಯ ಸಾಕ್ಷ್ಯ ಅಲ್ಲದೆ ತತ್ಸಂಬಂಧಿತ ವಕೀಲರ ವಾದಗಳನ್ನು ಪರಿಗಣಿಸಿ, ಈ ನ್ಯಾಯಾಲಯವು, ಆಪಾದಿತನ ಕಡೆಯಿಂದ ಯಾವುದೇ ಉದ್ದೇಶಪೂರ್ವಕ ಉಲ್ಲಂಘನೆಯಾಗಿತ್ತೇ? ಎಂಬುದನ್ನು ಖಚಿತಪಡಿಸುವ ಸಲುವಾಗಿ ದಾಖಲೆಯಲ್ಲಿನ ವಸ್ತುವಿಷಯವನ್ನು ವಿವೇಚಿಸಬೇಕಾಗುತ್ತದೆ.

22. ಆಪಾದಿತನುದಿನಾಂಕ: 09.02.2017 ರ ಮಧ್ಯಂತರ ಆದೇಶವನ್ನು ವಿವಾದಿಸುವುದಿಲ್ಲ.ಪಾಟೀ-ಸವಾಲಿನಲ್ಲಿದಿನಾಂಕ: 09.02.2017 ರ ಆದೇಶದ ಮೂಲಕ, ನ್ಯಾಯಾಲಯವು ತನ್ನ ಹಾಗೂ ದೂರುದಾರನ ವಿರುದ್ಧ ಯಥಾಸ್ಥಿತಿ ಆದೇಶವನ್ನು ನೀಡಿರುತ್ತದೆಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾನೆ.ಈ ಒಪ್ಪಿಗೆಯ ಹಿನ್ನೆಲೆಯಲ್ಲಿ, ಎಂ.ಎಫ್.ಎ.ಸಂಖ್ಯೆ: 6323/2016 ಗೆ ಸಂಬಂಧಿಸಿದ ಎಂ.ಎಫ್.ಎ.ಸಂಖ್ಯೆ: 7719/2016 ರಲ್ಲಿದಿನಾಂಕ: 09.02.2017 ರ ಆದೇಶದ ಮೇರೆಗೆ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವಂತೆ ಉಭಯ ಪಕ್ಷಕಾರರಿಗೆ ನಿರ್ದೇಶನ ನೀಡಿರುವ ಯಥಾಸ್ಥಿತಿಯ ಆದೇಶವಿತ್ತೆಂಬುದು ಸ್ಪಷ್ಟವಾಗಿರುತ್ತದೆ.ಯಥಾಸ್ಥಿತಿ ಆದೇಶ ಎಂದರೆ ಇಬ್ಬರೂ ಪಕ್ಷಕಾರರು ಸದರಿ ಆದೇಶದ ದಿನಾಂಕದಂದು ಸ್ವತ್ತು ಎಲ್ಲಿ ಮತ್ತು ಹೇಗೆ ಇತ್ತೋ ಹಾಗೆಯೇ ಕಾಪಾಡಿಕೊಂಡು ಬರಬೇಕೆಂಬುದಾಗಿರುತ್ತದೆಂದು ಪಾಟೀಸವಾಲಿನಿಂದ ತಿಳಿದುಬಂದಿರುತ್ತದೆ.ಅಲ್ಲದೆ, ಪಾಟೀ ಸವಾಲಿನಲ್ಲಿ, ಸದರಿ ಮಧ್ಯಂತರ ಆದೇಶವನ್ನು ನಿಶಾನೆ ಪಿ .4 ರ ನಿಬಂಧನೆಗಳಲ್ಲಿದಿನಾಂಕ: 08.06.2017 ರಂದು ನ್ಯಾಯಾಲಯವು ವಿಸ್ತರಿಸಿತ್ತೆಂದು ಮತ್ತು ಸದರಿ ಆದೇಶವು ಆವರಣದ ಎರಡನೇ ಮಹಡಿಯ ಮೇಲೆ ಅಂದರೆ ಮೂರನೇ ಮಹಡಿಯಲ್ಲಿ ಯಾವುದೇ ನಿರ್ಮಾಣ ಕಾರ್ಯ ಕೈಗೊಳ್ಳಬಾರದೆಂದು ಸೂಚಿಸುತ್ತದೆಂಬುದನ್ನು ಸ್ಪಷ್ಟವಾಗಿ ಒಪ್ಪಿಕೊಂಡಿದ್ದಾರೆಂಬುದನ್ನು ಸೂಚಿಸುತ್ತದೆ.ಮು ಂ ದುವರೆದು, ನಿಶಾನೆ ಪಿ .18 ಎಂದು ಗುರುತು ಮಾಡಿದ ಂ ಥದಿನಾಂಕ: 19.01.2018 ರ ತನ್ನ ಪ್ರತಿ ಅಫಿಡಾವಿಟ್ಟಿನಲ್ಲಿ ತಾನು ನೀಡಿದ ಹೇಳಿಕೆಗಳಿಗೆ ಆತ ಬದ್ಧನಾಗಿರುತ್ತಾನೆಂಬುದು ತಿಳಿದುಬಂದಿರುತ್ತದೆ.

23. ಆಕ್ಷೇಪಣಾ ಹೇಳಿಕೆಗಳನ್ನು ಪರಿಶೀಲಿಸಿದ ಮೇಲೆದಿನಾಂಕ: 08.06.2017 ರ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಎರಡನೇ ಮಹಡಿಯ ಮೇಲೆ ಅಂದರೆ ಮೂರನೇ ಮಹಡಿಯಲ್ಲಿ ಯಾವುದೇ ನಿರ್ಮಾಣ, ದುರಸ್ತಿ, ಮಾರ್ಪಾಟು, ಬದಲಾವಣೆ ಅಥವಾ ಯಾವುದೇ ಸ್ವರೂಪದ ನಿರ್ಮಾಣ ಕಾರ್ಯವನ್ನು ಮಾಡಲಾಗಿಲ್ಲವೆಂದು ಆತನು ಪ್ರತಿವಾದಿಸಿರುತ್ತಾನೆಂಬುದು ತಿಳಿದುಬಂದಿರುತ್ತದೆ.ಆದರೆ ಕಟ್ಟಡದ ಮೊದಲ ಮಹಡಿ ಹಾಗೂ ಎರಡನೇ ಮಹಡಿಗಳಲ್ಲಿ ಕೆಲವು ನವೀಕರಣದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆಯೆಂದು, ದೂರುದಾರನಿಗೆ ಸದರಿ ಅಂಶದ ಬಗೆಗೆ ತಿಳಿದಿದ್ದಾಗ್ಯೂ ಕೂಡ, ಅವನು,ದಿನಾಂಕ: 08.06.2017 ರ ಆದೇಶವನ್ನು ಉಲ್ಲಂಘಿಸುವ ಮೂಲಕ ಮೂರನೇ ಮಹಡಿಯಲ್ಲಿ ನಿರ್ಮಾಣ ಚಟುವಟಿಕೆಗಳನ್ನು ಆಪಾದಿತನು ಮುಂದುವರೆಸಿರುತ್ತಾನೆಂದು ವಾದಿಸಲು ಉದ್ದೇಶಪೂರ್ವಕವಾಗಿ ಕಲ್ಪಿತ ಛಾಯಾಚಿತ್ರಗಳನ್ನು ಹಾಜರುಪಡಿಸಿರುತ್ತಾನೆಂದು ವಾದಿಸಲಾಗಿದೆ.

24. ಅಕ್ಷೇಪಣಾ ಹೇಳಿಕೆಯನ್ನು ಪರಿಗಣಿಸಿದಾಗ, ಆಪಾದಿತನು ಕಟ್ಟಡದ ಮೊದಲ ಮಹಡಿ ಹಾಗೂ ಎರಡನೇ ಮಹಡಿಯಲ್ಲಿ ನವೀಕರಣದ ಕಾಮಗಾರಿಗಳನ್ನು ಕೈಗೊಂಡಿರುತ್ತಾನೆಂಬುದು ಸ್ಪಷ್ಟವಾಗಿರುತ್ತದೆ.ನಿರ್ಮಾಣ

ಕಾರ್ಯವುದಿನಾಂಕ: 08.06.2017 ಕ್ಕೆ ಮೊದಲೇ ಪೂರ್ಣಗೊಂಡಿರುತ್ತದೆಂಬುದು ಇವನ ಮುಖ್ಯ ಪ್ರತಿವಾದವಾಗಿರುತ್ತದೆ.ಪಾಟೀ ಸವಾಲಿನಲ್ಲಿನ ಡಿ.ಡಬ್ಲ್ಯು .1 ರ ಸ್ಪಷ್ಟವಾಗಿ ಒಪ್ಪಿಗೆಯಿಂದ ಉಭಯ ಪಕ್ಷಕಾರರ ವಿರುದ್ಧದಿನಾಂಕ: 09.02.2017 ರ ಆದೇಶ ಮತ್ತು ಯಥಾಸ್ಥಿತಿಯ ಆದೇಶವನ್ನು ನೀಡಲಾಗಿರುತ್ತೆಂದು ದೂರುದಾರನಿಗೆ ತಿಳಿದಿತ್ತೆಂಬುದಾಗಿದೆ.ಮುಂದುವರೆದು, ಯಥಾಸ್ಥಿತಿಯ ಆದೇಶವೆಂದರೆ, ಇಬ್ಬರೂ ಪಕ್ಷಕಾರರು ಸದರಿ ಆದೇಶದ ದಿನಾಂಕದಂದು ಸ್ವತ್ತು ಎಲ್ಲಿ ಮತ್ತು ಹೇಗೆ ಇತ್ತೋ ಹಾಗೆಯೇ ಕಾಪಾಡಬೇಕೆಂಬುದಾಗಿರುತ್ತದೆಂಬುದು ತಿಳಿದುಬರುತ್ತದೆ ಹಾಗೂದಿನಾಂಕ: 09.02.2017 ಹಾಗೂ 08.06.2017 ರ ಆದೇಶವನ್ನು ಹೊರಡಿಸಿದ ತರುವಾಯ, ಆಪಾದಿತನು ಕೈಗೊಂಡ ಪ್ರತಿಯೊಂದು ನಿರ್ಮಾಣ ಚಟುವಟಿಕೆಯು ನ್ಯಾಯಾಲಯದ ಆದೇಶವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘನೆ ಮಾಡಿದಂತಾಗುತ್ತದೆ.ಆಪಾದಿತನಿಗೆದಿನಾಂಕ: 09.02.2017 ರಂದು ನೀಡಿದಂಥ ಯಥಾಸ್ಥಿತಿ ಆದೇಶದ ಅರ್ಥ ತಿಳಿದಿದ್ದಾಗ್ಯೂ, ಅವನು ನಿರ್ಮಾಣ ಕಾಮಗಾರಿಯನ್ನು ಮುಂದುವರೆಸಿರುತ್ತಾನೆ.ಆಪಾದಿತನು ಸುನಾವಣೆಯ ಮುಂದಿನ ದಿನಾಂಕದವರೆಗೆ ಎರಡನೇ ಮಹಡಿಯ ಮೇಲೆ ಅಂದರೆ ಮೂರನೇ ಮಹಡಿಯಲ್ಲಿ ಯಾವುದೇ ಮಾರ್ಪಾಟು, ಬದಲಾವಣೆ, ದುರಸ್ಥಿ ಅಥವಾ ಅನ್ಯಥಾ ಯಾವುದೇ ನಿರ್ಮಾಣ ಚಟುವಟಿಕೆಗಳನ್ನು ಮುಂದುವರೆಸತಕ್ಕದ್ದಲ್ಲವೆಂಬುದನ್ನೂ ಸಹದಿನಾಂಕ: 08.06.2017 ರ ಆದೇಶವು ಸುಸ್ಪಷ್ಟಪಡಿಸುತ್ತದೆ.ಹೀಗಿದ್ದರೂ, ಆಪಾದಿತನು ನವೀಕರಣ ಕಾಮಗಾರಿಯನ್ನು ಕೈಗೊಂಡಿರುತ್ತಾನೆ.ದೂರುದಾರನು ನಿಶಾನೆ ಪಿ .5ದಿನಾಂಕ: 04.09.2017, ನಿಶಾನೆ ಪಿ .6ದಿನಾಂಕ: 02.09.2017, ನಿಶಾನೆ ಪಿ .7ದಿನಾಂಕ: 02.09.2017 ನಿಶಾನೆ ಪಿ .8ದಿನಾಂಕ: 02.09.2017, ನಿಶಾನೆ ಪಿ .9ದಿನಾಂಕ: 14.06.2017 ಗಳನ್ನು ಹಾಜರುಪಡಿಸಿರುತ್ತಾನೆ.ಈ ಎಲ್ಲಾ ಛಾಯಾಚಿತ್ರಗಳುದಿನಾಂಕ: 08.06.2017 ನೇ ದಿನಾಂಕದ ತರುವಾಯದವಾಗಿದ್ದು, ಮಧ್ಯಂತರ ಆದೇಶದ ತರುವಾಯ ಕೂಡ ಕಾಮಗಾರಿಯು ಮುಂದುವರೆದಿರುತ್ತದೆಂಬುದಕ್ಕೆ ಸಾಕ್ಷ್ಯವಾಗಿದೆ.ದೂರುದಾರನು ಹಾಜರುಪಡಿಸಿದ ಛಾಯಾಚಿತ್ರಗಳ ದಸ್ತಾವೇಜುಗಳನ್ನು ದಾವೆ ಹೂಡುವುದಕ್ಕೆ ದೂರುದಾರನ ಅನುಕೂಲತೆಗಾಗಿ ಸೃಜಿಸಿರುವುದರಿಂದ ಅವುಗಳನ್ನು ಅವಲ ೦ ಬಿಸಲಾಗುವುದಿಲ್ಲವೆಂಬುದು ಆಪಾದಿತನ ವಾದವಾಗಿರುತ್ತದೆ.

25. ಆಪಾದಿತನ ಪರ ಹಾಜರಾದ ಮಾನ್ಯ ನ್ಯಾಯವಾದಿಯು, ಪಿ.ಕೆ. ಬಷೀರ್ (ಪೂರ್ವೋಕ್ತ) ಮೊಕದ್ದಮೆಯಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಚ ಉದಾಹರಿಸಿದ್ದು, ಅದರಲ್ಲಿ, ಪ್ರಮಾಣಪತ್ರವು ಇಲ್ಲದಿರುವಾಗ, ವಿದ್ಯುನ್ಮಾನ ದಾಖಲೆಗಳ ಎರಡನೇ ಸಾಕ್ಷ್ಯವನ್ನು ಗಣನೆಗೆ ತೆಗೆದುಕೊಳ್ಳಬಾರದೆಂದು ಅಭಿಪ್ರಾಯಪಡಲಾಗಿದೆ.ದೂರುದಾರನ ಪರ ಮಾನ್ಯ ನ್ಯಾಯವಾದಿಯು, ಆಪಾದಿತರ ವಾದಗಳಿಗೆ ಉತ್ತರಿಸುವಾಗ, ಅರ್ಜಿಯನ್ನು, ಪ್ರಮಾಣಪತ್ರದೊಂದಿಗೆ ಭಾರತ ಸಾಕ್ಷ್ಯ ಎ ಅಧಿನಿಯಮದ 65 ಬಿ ಪ್ರಕರಣದಡಿಯಲ್ಲಿ ಸಲ್ಲಿಸಿದ್ದು, ಸದರಿ ಛಾಯಾಚಿತ್ರದ ಸಂಬಂಧದಲ್ಲಿ ನಿಶಾನೆ ಪಿ .10 ಎಂದು ಗುರುತು ಮಾಡಲಾದಂಥ ಸಿ.ಡಿ.ಯನ್ನು ಸಹ ಹಾಜರುಪಡಿಸಲಾಗಿರುತ್ತದೆಂಬುದನ್ನು ನಮ್ಮ ಗಮನಕ್ಕೆ ತಂದಿರುತ್ತಾರೆ.ಆಪಾದಿತನ ಈ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ.ಪಿ.ಕೆ. ಬಷೀರ್ ಮೊಕದ್ದಮೆಯಲ್ಲಿ (ಪೂರ್ವೋಕ್ತ) ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ತರುವಾಯ, ಸರ್ವೋಚ್ಚ ಚ ನ್ಯಾಯಾಲಯವು ಸೋನು ಅಲಿಯಾಸ್ ಅಮರ್ -ವಿರುದ್ಧ ಹರಿಯಾಣ ಸರ್ಕಾರ (2017) 3 ಎಸ್ಸಿ (ಸಿಆರ್ಐ) 663 ಹಾಗೂ ಷಫಿ ಮೊಹಮದ್ -ವಿರುದ್ಧ ಹಿಮಾಚಲ ಪ್ರದೇಶ ರಾಜ್ಯ 6 ಮೊಕದ್ದಮೆಯಲ್ಲಿ ಇದೇ ಸ್ವರೂಪದ ವಿಷಯವನ್ನು ವ್ಯವಹರಿಸಿರುವುದನ್ನು ಗಮನಿಸಬೇಕಾಗಿರುತ್ತದೆ.ಷಫಿ ಮೊಹಮದ್ (ಪೂರ್ವೋಕ್ತ) ಮೊಕದ್ದಮೆಯಲ್ಲಿ

ಸರ್ವೋಚ್ಚ ನ್ಯಾಯಾಲಯವು, ಚ ಸಾಕ್ಷ್ಯ ಎಣಿ ಅಧಿನಿಯಮದ 65 (ಬಿ) ( 4) ಪ್ರಕರಣದಡಿಯಲ್ಲಿ ಪ್ರಮಾಣಪತ್ರವನ್ನು ಹಾಜರುಪಡಿಸುವುದು ಒಂದು ಅಗತ್ಯ ಕಾರ್ಯವಿಧಾನವಾಗಿದೆಯೆಂದು ಅದನ್ನು ನ್ಯಾಯದ ಹಿತಾಸಕ್ತಿಯನ್ನು ಸಮರ್ಥಿಸುವೆಡೆಯಲೆಲ್ಲಾ ನ್ಯಾಯಾಲಯವು ವಿನಾಯಿತಿಕೊಡಬಹುದೆಂದು ಅಭಿಪ್ರಾಯಪಟ್ಟಿರುತ್ತದೆ.ಹಾಗಾಗಿ, 65 (ಬಿ) ( 4) ನೇ ಪ್ರಕರಣದಡಿಯಲ್ಲಿ ಪ್ರಮಾಣಪತ್ರದ ಅಗತ್ಯತೆಯನ್ನು ಯಾವಾಗಲೂ ಕಡ್ಡಾಯ ಮಾಡುವಂತಿಲ್ಲ.ಸದರಿ ತೀರ್ಪಿನ 29 ಹಾಗೂ 30 ನೇ ಪ್ಯಾರಾಗಳು ಈ ಮುಂದಿನಂತಿರುತ್ತವೆ:

"29. ಪ್ರಮಾಣಪತ್ರವನ್ನು ಒದಗಿಸುವ ಸಾಕ್ಷ್ಯ ಎ ಅಧಿನಿಯಮದ 65-ಬಿ ( 4) ನೇ ಪ್ರಕರಣದಡಿಯಲ್ಲಿನ ಪ್ರಕ್ರಿಯೆಯ ಅಗತ್ಯತೆಯ ಅನ್ವಯವನ್ನು, ಅಂಥ ವಿದ್ಯುನ್ಮಾನ ಸಾಕ್ಷ್ಯವನ್ನು, ಸದರಿ ಸಾಧನದ ನಿಯಂತ್ರಣದಲ್ಲಿರುವ ಅಂಥ ಪ್ರಮಾಣಪತ್ರವನ್ನು ಹಾಜರುಪಡಿಸುವ ಸ್ಥಾನದಲ್ಲಿರುವಂಥ ವ್ಯಕ್ತಿಯು ಹಾಜರುಪಡಿಸಿದಾಗ ಮಾತ್ರ ಅನ್ವಯಿಸಬೇಕಾಗುತ್ತದೆಯೇ ಹೊರತು, ಎದುರು ಪಕ್ಷಕಾರರಲ್ಲ.ಸಾಧನವನ್ನು ಹೊಂದಿರದಂಥ ವ್ಯಕ್ತಿಯು ವಿದ್ಯುನ್ಮಾನ ಸಾಕ್ಷ್ಯವನ್ನು ಹಾಜರುಪಡಿಸಿದ ಸಂದರ್ಭದಲ್ಲಿ ಸಾಕ್ಷ್ಯ ವಿಶ ಅಧಿನಿಯಮದ 63 ಹಾಗೂ 65 ನೇ ಪ್ರಕರಣದ ಅನ್ವಯನವನ್ನು ಬಿಟ್ಟು ಬಿಡಬೇಕೆಂದು ಹೇಳುವ ಂ ತಿರುವುದಿಲ್ಲ.ಅ ಂ ಥ ಸ ಂ ದರ್ಭದಲ್ಲಿ, ಸದರಿ ಪ್ರಕರಣಗಳಡಿಯಲ್ಲಿನ ಪ್ರಕ್ರಿಯಾ ವಿಧಾನವನ್ನು ಖಂಡಿತ ಅನ್ವಯಿಸಬೇಕಾಗುತ್ತದೆ.ಇದಕ್ಕೆ ಹಾಗೆ ಅನುಮತಿಸದಿದ್ದಲ್ಲಿ, ವಿಶ್ವಾಸಾರ್ಹ ಸಾಕ್ಷ್ಯ/ಸಾಕ್ಷಿಯನ್ನು ಹೊಂದಿರುವಂಥ ವ್ಯಕ್ತಿಗೆ ನ್ಯಾಯವನ್ನು ನಿರಾಕರಿಸಿದಂತಾಗುತ್ತದೆ. ಆದರೆ ರುಜುವಾತುಪಡಿಸುವ ರೀತಿಯ ಕಾರಣದಿಂದಾಗಿ, ಅಂಥ ದಸ್ತಾವೇಜನ್ನು, ಸಾಕ್ಷ ಎ ಅಧಿನಿಯಮದ 65-ಬಿ ( 4) ನೇ ಪ್ರಕರಣದಡಿಯಲ್ಲಿ ಪ್ರಮಾಣಪತ್ರವು ಇಲ್ಲದಿರುವಾಗ, ನ್ಯಾಯಾಲಯವು ಪರಿಗಣನೆಯಿ ಂ ದ ಹೊರಗಿಡಬೇಕಾಗಿದ್ದು, ಇದನ್ನು ಹಾಜರುಪಡಿಸುವ ಪಕ್ಷಕಾರನು ಅದನ್ನು ಕಾಪಾಡಿಕೊಳ್ಳಲು ಸಾಧ್ಯವಾಗುವುದಿಲ್ಲ.ಹಾಗಾಗಿ 65-ಬಿ ( 4) ನೇ ಪ್ರಕರಣದಡಿಯಲ್ಲಿನ ಪ್ರಮಾಣಪತ್ರದ ಅಗತ್ಯತೆಯು ಯಾವಾಗಲೂ ಕಡ್ಡಾಯವಾಗಿರುವುದಿಲ್ಲ.

30. ತದನುಸಾರವಾಗಿ, ನಾವು, ವಿದ್ಯುನ್ಮಾನ ಸಾಕ್ಷ್ಯ ಅಂಗೀಕಾರಾರ್ಹತೆಯ ವಿಷಯದ ಬಗ್ಗೆ, ನಿರ್ದಿಷ್ಟವಾಗಿ ದಸ್ತಾವೇಜನ್ನು ಹಾಜರುಪಡಿಸಿರುವಂಥ ಸಾಧನವನ್ನು ಹೊಂದಿರದಂಥ ವ್ಯಕ್ತಿಯನ್ನು ಕುರಿತ ಕಾನೂನು ಸ್ಥಿತಿಗತಿಯನ್ನು ಸ್ಪಷ್ಟಪಡಿಸಿದ್ದೇವೆ.ಅಂಥ ಪಕ್ಷಕಾರನು, ಸಾಕ್ಷ್ಯ ಅಧಿನಿಯಮದ 65-ಬಿ ( 4) ನೇ ಪ್ರಕರಣದಡಿಯಲ್ಲಿ ಪ್ರಮಾಣಪತ್ರವನ್ನು ಹಾಜರುಪಡಿಸುವ ಅಗತ್ಯವಿರುವುದಿಲ್ಲ.ಪ್ರಕ್ರಿಯಾ ವಿಧಾನವಾಗಿರುವ ಪ್ರಮಾಣಪತ್ರದ ಅಗತ್ಯತೆಯ ಅನ್ವಯನವನ್ನು ನ್ಯಾಯದ ಹಿತಾಸಕ್ತಿಯನ್ನು ಸಮರ್ಥಿಸುವೆಡೆಯಲ್ಲೆಲ್ಲಾ ನ್ಯಾಯಾಲಯವು ಸಡಿಲಗೊಳಿಸಬಹುದಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ಪ್ರಮಾಣಪತ್ರವನ್ನು ಹಾಜರುಪಡಿಸಿ, ವಿದ್ಯುನ್ಮಾನ ಸಾಕ್ಷ್ಯವನ್ನು ಹಾಜರುಪಡಿಸಲು ಅನುಮತಿಯನ್ನು ಕೋರಿ ಅರ್ಜಿಯನ್ನು ಸಲ್ಲಿಸಿದೆ.ಅಲ್ಲದೆ ಸದರಿ ಅರ್ಜಿಗೆ ಐ.ಎ.ಸಂಖ್ಯೆ:1 ಎಂದು ಸಂಖ್ಯೆಯನ್ನು ನೀಡಿ, ಅದನ್ನು ಅಂಗೀಕರಿಸಲಾಗಿದೆ.ಆದರೆ ಪ್ರಮಾಣಪತ್ರವನ್ನು ಗುರುತು ಮಾಡಿರುವುದಿಲ್ಲ.ಹಾಗಾಗಿ, ಆಪಾದಿತರ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

26. ದೂರುದಾರನು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39, ನಿಯಮ 2 ಎ ಅಡಿಯಲ್ಲಿ ಉಪಬಂಧಿಸಿದ ಪರಿಣಾಮಕಾರಿ ಪರಿಹಾರವನ್ನು ಬಳಸಿಕೊಳ್ಳಬೇಕಾಗಿತ್ತೆಂಬುದು ಆಪಾದಿತನ ಮತ್ತೊಂದು ವಾದವಾಗಿರುತ್ತದೆ.ಆದಾಗ್ಯೂ, ಈತ ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರ ಮುಂದೆ ಸದರಿ ಅರ್ಜಿಯನ್ನು

ಮಂಡಿಸದೆ ಅರ್ಜಿಯನ್ನು ಸಲ್ಲಿಸಿದ್ದು, ಯಾವುದೇ ಆದೇಶವನ್ನು ಹೊರಡಿಸಿರುವುದಿಲ್ಲ.ನಿಂದನಾ ಅಧಿನಿಯಮದಡಿಯಲ್ಲಿನ ಪರಿಹಾರವನ್ನು ಮಿತವಾಗಿಯೇ ಬಳಸಬೇಕಾಗಿದ್ದು, ಪರಿಹಾರವು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 2 ಎ ದಡಿಯದಾಗಿರುತ್ತದೆ.ಹಾಗಾಗಿ, ನಿಂದನಾ ಅರ್ಜಿಯು ಸಮರ್ಥನೀಯವಾಗಿರುವುದಿಲ್ಲ.ಈತ ಗೋವಿಂದರಾಜು ಮೊಕದ್ದಮೆಯಲ್ಲಿ (ಪೂರ್ವೋಕ್ತ) ಈ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪಿನಲ್ಲಿ ವಿಧಿಸಿದ ತತ್ವಗಳನ್ನು ಅವಲಂಬಿಸಿರುತ್ತಾನೆ.ಅದರಲ್ಲಿ, ಸದರಿ ಪ್ರಕರಣದಲ್ಲಿನ ಆಪಾದಿತನು, ದೂರುದಾರನ ಕಟ್ಟಡವನ್ನು ಕೆಡವಿದ್ದು, ಇದು ಭಾರತ ದಂಡ ಸಂಹಿತೆಯ 415 ನೇ ಪ್ರಕರಣದಡಿಯಲ್ಲಿನ ' ದುರ್ನಡತೆ ' ಪರಿಭಾಷೆಗೆ ಅನ್ವಯವಾಗುತ್ತದೆಂದು ಹಾಗೂ ಪ್ರತ್ಯರ್ಜಿದಾರರ ಕೃತ್ಯವು ಸ್ವತಃ ಭಾರತ ದಂಡ ಸಂಹಿತೆಯಡಿಯಲ್ಲಿ ದಂಡನೀಯ ಅಪರಾಧವಾಗಿರುವುದರಿಂದ ಉಪಬಂಧಗಳಡಿಯಲ್ಲಿನ ನಿರ್ಬಂಧವು ಅನ್ವಯವಾಗುತ್ತದೆ ಹಾಗೂ ಈ ನ್ಯಾಯಾಲಯವು ನಿಂದನಾ ಸಂಜ್ಞೆಯವನ್ನು ಕೈಗೊಳ್ಳುವುದಿಲ್ಲವೆಂದೂ ಅಭಿಪ್ರಾಯಪಡಲಾಗಿರುತ್ತದೆ.ಪ್ರಸ್ತುತ ಪ್ರಕರಣದ ವಾಸ್ತವಾಂಶಗಳು ಉಲ್ಲೇಖಿತ ಪ್ರಕರಣದಿಂದ ಭಿನ್ನವಾಗಿದೆ.ದೂರುದಾರನಂಥ ವ್ಯಕ್ತಿಯು ಯಾವುದಾದರೂ ಒಂದು ವೇದಿಕೆಯನ್ನು ಆಯ್ಕೆ ಮಾಡಿಕೊಳ್ಳಬೇಕೆ ಹೊರತು, ಎರಡೂ ವೇದಿಕೆಗಳನ್ನು ಆಯ್ಕೆ ಮಾಡಿಕೊಳ್ಳುವಂತಿಲ್ಲ.ಆದರೆ, ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39, ನಿಯಮ 2 ಎ ಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದಾಗ್ಯೂ, ಒಪ್ಪಿಕೊಂಡಂತೆ ಸದರಿ ಅರ್ಜಿಯನ್ನು ಮಂಡಿಸದೆ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ.ಆದರೆ ಯಾವುದೇ ಆದೇಶವನ್ನು ಹೊರಡಿಸಿರುವುದಿಲ್ಲ.ಹಾಗಾಗಿ, ಸದರಿ ಅರ್ಜಿಯನ್ನು ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರ ಮುಂದೆ ಮಂಡಿಸಿರಲಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ.ಅದಕ್ಕೆ ಬದಲಾಗಿ, ದೂರುದಾರನು ಈ ಪ್ರಕರಣವನ್ನು ಮುಂದುವರೆಸುವುದನ್ನು ಆಯ್ಕೆ ಮಾಡಿಕೊಂಡಿರುತ್ತಾನೆ.

27. ದೂರುದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಯ, ಪಟೇಲ್ ರಜನಿಕಾಂತ್ ಧುಲಭಾಯಿ ಮೊಕದ್ದಮೆಯಲ್ಲಿನ (ಪೂರ್ವೋಕ್ತ) ತೀರ್ಪನ್ನು ಉಲ್ಲೇಖಿಸಿ, ತೀರ್ಪಿನ 70 ನೇ ಪ್ಯಾರಾವನ್ನು ಈ ನ್ಯಾಯಾಲಯದ ಗಮನಕ್ಕೆ ತಂದಿರುತ್ತಾನೆ.ಇದನ್ನು ಈ ಮುಂದಿನಂತೆ ಓದಲಾಗಿದೆ:

"70. ಮೇಲಿನ ನಿರ್ಣಯಗಳಿಂದ, ನ್ಯಾಯಾಲಯದ ನಿಂದನೆಗೆ ಸಂಬಂಧಿಸಿದಂತೆ ವ್ಯಕ್ತಿಯನ್ನು ದಂಡಿಸುವುದು ವಾಸ್ತವವಾಗಿ ತುಂಬಾ ಕಠಿಣ ಕ್ರಮವಾಗಿದ್ದು, ಸಾಮಾನ್ಯವಾಗಿ ಅಂಥ ಕ್ರಮವನ್ನು ತೆಗೆದುಕೊಳ್ಳಬಾರದು.ಆದಾಗ್ಯೂ, ಅದೇ ಸಮಯದಲ್ಲಿ, ಇದು ಕೇವಲ ಅಧಿಕಾರ ಮಾತ್ರವಾಗಿರದೆ ನ್ಯಾಯಾಲಯಗಳ ಘನತೆಯನ್ನೂ ಹಾಗೂ ಆತ್ಯಂತಿಕ ಕ್ರಮವನ್ನೂ ಅಪೇಕ್ಷಿಸಬಹುದಾದ ಕಾನೂನಿನ ಘನತೆಯನ್ನು ಎತ್ತಿಹಿಡಿಯುವುದು ಹಾಗೂ ಕಾಪಾಡುವುದು ನ್ಯಾಯಾಲಯಗಳ ಕರ್ತವ್ಯವೂ ಆಗಿರುತ್ತದೆ.ಯುಕ್ತ ನ್ಯಾಯಾಡಳಿತಕ್ಕೆ ಸಂಬಂಧಿಸಿದಂತೆ ಮತ್ತು ನ್ಯಾಯಾಲಯವು ಹೊರಡಿಸಿದ ಆದೇಶಗಳ ಅನುಪಾಲನೆಯಾಗುವಂತೆ ನೋಡಿಕೊಳ್ಳಲು ಅಧಿನಿಯಮದಡಿಯಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದನ್ನು ಇದು ಅಗತ್ಯಪಡಿಸಿದಲ್ಲಿ, ನಿ ಂ ದನೆಯ ಂ ಥ ಪ್ರಬಲ ಅಸ್ತ್ರವನ್ನು ಪ್ರಯೋಗಿಸುವಲ್ಲಿ ಹಿ ಂ ಜರಿಯಬಾರದು.99

28. ತೀರ್ಪಿನಲ್ಲಿ ವಿಧಿಸಿದ ತತ್ವಗಳ ಹಿನ್ನಲೆಯಲ್ಲಿ, ಈ ನ್ಯಾಯಾಲಯವು ನಿಂದನಾ ಅಧಿನಿಯಮವನ್ನು ಅನ್ವಯಿಸುವ ಸಲುವಾಗಿ ಪರಿಶೀಲಿಸಬೇಕಾಗಿದ್ದು, ಅದಕ್ಕಾಗಿ, ನ್ಯಾಯಾಲಯಗಳ ನಿಂದನಾ ಅಧಿನಿಯಮದ 2 (ಬಿ) ಪ್ರಕರಣದ ಅಂಶಗಳನ್ನು ಗಮನಿಸಬೇಕಾದ ಅವಶ್ಯಕತೆಯಿದೆ.ಇದು ಯಾವುದೇ ತೀರ್ಪು, ಡಿಕ್ರಿ, ನಿರ್ದೇಶನ,

ಆದೇಶ, ರಿಟ್ ಅಥವಾ ನ್ಯಾಯಾಲಯದ ಇತರೆ ಕಾರ್ಯವಿಧಾನದ ಉದ್ದೇಶಪೂರ್ವಕ ಉಲ್ಲಂಘನೆ ಅಥವಾ ನ್ಯಾಯಾಲಯಕ್ಕೆ ಮುಚ್ಚಳಿಕೆಯ ಉದ್ದೇಶಪೂರ್ವಕ ಉಲ್ಲಂಘನೆಯಾಗಿರಬೇಕು ಎಂಬುದನ್ನು ಅಗತ್ಯಪಡಿಸುತ್ತದೆ.

29, ನ್ಯಾಯಾಲಯಗಳ ನಿಂದನಾ ಅಧಿನಿಯಮದ 2 (ಬಿ) ಪ್ರಕರಣದ ಒಳಾಂಶಗಳನ್ನು ಪರಿಗಣಿಸಿ, ಈ ನ್ಯಾಯಾಲಯವು, ನ್ಯಾಯಾಲಯದ ಆದೇಶದ ಉದ್ದೇಶಪೂರ್ವಕ ಉಲ್ಲಂಘನೆಯಾಗಿದೆಯೇ ಎಂಬುದನ್ನು ಪರಿಗಣಿಸಬೇಕಾಗುತ್ತದೆ.ಡಿ.ಡಬ್ಲ್ಯು .1 ರ ಪಾಟೀ ಸವಾಲಿನಲ್ಲಿ ಅವನುದಿನಾಂಕ: 09.02.2017 ರ ಆದೇಶದ ಮೇರೆಗೆ ಎಂ.ಎಫ್.ಎ. ದಲ್ಲಿ ಈ ನ್ಯಾಯಾಲಯವು ಹೊರಡಿಸಿದ ಆದೇಶದ ಬಗ್ಗೆ ತನಗೆ ತಿಳಿದಿತ್ತೆಂಬುದನ್ನು ಒಪ್ಪಿಕೊಂಡಿದ್ದಾನೆಂಬುದನ್ನು ನಾವು ಈಗಾಗಲೇ ಪ್ರಸ್ತಾಪಿಸಿರುತ್ತೇವೆ.ದೂರುದಾರ ಹಾಗೂ ಆಪಾದಿತ ಇಬ್ಬರೂ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಬೇಕೆಂದು ಆದೇಶ ಮಾಡಲಾಗಿತ್ತು.ಅಲ್ಲದೆ, ಡಿ.ಡಬ್ಲ್ಯು .1 ರ ಪಾಟೀ ಸವಾಲಿನಲ್ಲಿ ಆತನಿಗೆ ' ಯಥಾಸ್ಥಿತಿ ' ಪದದ ಅರ್ಥ ಅಂದರೆ ಆದೇಶದ ದಿನಾಂಕದಂದು ಸ್ವತ್ತು ಎಲ್ಲಿ ಹೇಗೆ ಇದೆಯೋ ಹಾಗೆಯೇ ಕಾಪಾಡಬೇಕೆಂಬ ಅರ್ಥದ ಅರಿವಿರುತ್ತದೆಂಬುದೂ ಸಹ ತಿಳಿದುಬರುತ್ತದೆ.ಆಪಾದಿತನು ಸಹ ಸದರಿ ಆದೇಶವನ್ನುದಿನಾಂಕ: 08.06.2017 ರ ಆದೇಶದ ಮೂಲಕ ವಿಸ್ತರಿಸಲಾಗಿತ್ತೆಂಬ ಅಂಶವನ್ನು ವಿವಾದಗೊಳಿಸಿರುವುದಿಲ್ಲ.ಆದರೆ,ದಿನಾಂಕ: 08.06.2017 ಕ್ಕೆ ಕ ಮೊದಲೇ ಕಾಮಗಾರಿಯನ್ನು ಪೂರ್ಣ ಗೊಳಿಸಲಾಗಿತ್ತೆಂಬುದು ಆತನ ವಾದವಾಗಿರುತ್ತದೆ.ಆಪಾದಿತನು ನಿಶಾನೆ ಪಿ .5 ರಿಂದ 9 ರ ವರೆಗೆ ಹಾಜರುಪಡಿಸಿದಂಥ ಛಾಯಾಚಿತ್ರಗಳನ್ನು ದೂರುದಾರನ ಅನುಕೂಲತೆಗೆ ಒಪ್ಪುವಂತೆ ಬದಲಾಯಿಸಲಾಗಿದೆಯೆಂಬ ವಾದವನ್ನು ಮಾಡಿದ್ದಾನೆ.ಸದರಿ ಪ್ರತಿವಾದವನ್ನೂ ತೆಗೆದುಕೊಂಡಾಗ, ಅದನ್ನು ರುಜುವಾತುಪಡಿಸುವ ಭಾರ ಆಪಾದಿತನ ಮೇಲಿದ್ದು, ಅದನ್ನು ಮಾಡಿರುವುದಿಲ್ಲ.ದೂರುದಾರನು ಛಾಯಾಚಿತ್ರಗಳನ್ನು ಸಿ.ಡಿ. ಯೊಂದಿಗೆ ಹಾಜರುಪಡಿಸಿದ್ದಾನೆ.ಆಪಾದಿತನು ವಾದಿಸಿದಂತೆ ಅವುಗಳನ್ನು ತಿರುಚಲಾಗಿದ್ದರೆ, ಅದನ್ನು ರುಜುವಾತುಪಡಿಸಬೇಕಾಗಿದ್ದು, ಅದನ್ನು ಸಹ ಮಾಡಿರುವುದಿಲ್ಲ.ಬರೀ ಪ್ರತಿವಾದವನ್ನು ಮಾಡಿದರೆ ಸಾಲದು.ತಿರುಚಿರುವ ಬಗ್ಗೆ ನ್ಯಾಯಾಲಯದ ಮುಂದೆ ಕೆಲವು ತರ್ಕಬದ್ಧ ಸಾಕ್ಷ್ಯಗಳಿರಲೇಬೇಕಾಗುತ್ತದೆ.

30. ನಿಶಾನೆ ಪಿ .5 ರಿಂದ 9 ಎಂದು ಗುರುತು ಮಾಡಿದಂಥ ಛಾಯಾಚಿತ್ರಗಳನ್ನು ಪರಿಶೀಲಿಸಿದ ಮೇಲೆ, ಅವುಗಳನ್ನುದಿನಾಂಕ: 14.06.2017 ರಿಂದ 04.09.2017 ರ ನಡುವೆ ತೆಗೆಯಲಾಗಿದೆಯೆಂಬುದು ಸ್ಪಷ್ಟವಾಗುತ್ತದೆ.ಹಾಗಾಗಿ, ಕಾಮಗಾರಿಯನ್ನು ಯಥಾಸ್ಥಿತಿ ಆದೇಶವನ್ನು ಮಾಡಿದ ತರುವಾಯವಲ್ಲದೆ,ದಿನಾಂಕ: 08.06.2017 ರ ಆದೇಶದ ಮೇರೆಗೆ ಏನನ್ನು ಮಾರ್ಪಾಟು ಅಥವಾ ಬದಲಾವಣೆ ಮಾಡುವಂತಿಲ್ಲವೆಂಬ ನಿರ್ದಿಷ್ಟ ನಿರ್ದೇಶನವನ್ನು ನೀಡಿದ ತರುವಾಯವೂ ಕೈಗೊಂಡಿರುವುದು ಸ್ಪಷ್ಟವಾಗುತ್ತದೆ.ಆಪಾದಿತನು ಸ್ವತಃ ಆಕ್ಷೇಪಣಾ ಹೇಳಿಕೆಯಲ್ಲಿ, ತಾನು ನವೀಕರಣ ಕಾಮಗಾರಿಗಳನ್ನು ನಿರ್ವಹಿಸಿದೆನೆಂದು ಒಪ್ಪಿಕೊಂಡಿರುತ್ತಾನೆಂಬುದನ್ನು ಗಮನಿಸಿಕೊಳ್ಳುವುದೂ ಮುಖ್ಯವಾಗಿರುತ್ತದೆ.ಆತ ಯಥಾಸ್ಥಿತಿಯ ಅರ್ಥ ಹಾಗೂದಿನಾಂಕ: 08.06.2017 ರ ಆದೇಶವನ್ನು ಅರ್ಥೈಸಿಕೊಂಡಿರುವಾಗ, ಆಪಾದಿತನು ಯಾವುದೇ ಕಾಮಗಾರಿಯನ್ನು ನಿರ್ವಹಿಸುವಂತಿರುವುದಿಲ್ಲ.ಆದರೆ ಈತ ಕಾಮಗಾರಿಯನ್ನು ನಿರ್ವಹಿಸಿರುತ್ತಾನೆ.ಹಾಗಾಗಿ, ಆಪಾದಿತನ ಕೃತ್ಯವು ನ್ಯಾಯಾಲಯದ ಆದೇಶದ ಉದ್ದೇಶಪೂರ್ವಕ ಉಲ್ಲಂಘನೆಯಲ್ಲದೆ ಬೇರೇನೂ ಅಲ್ಲ ಎಂಬುದು ಸ್ಪಷ್ಟವಾಗಿರುತ್ತದೆ.ಹಾಗಾಗಿ,ದಿನಾಂಕ: 08.06.2017 ಕ್ಕೆ

ಮೊದಲು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿತ್ತು.ತಾನು ಯಾವುದೇ ನಿಂದನಾ ಕೃತ್ಯವನ್ನು ಎಸಗಿರುವುದಿಲ್ಲವೆಂಬ ಆಪಾದಿತನ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

31.ದಿನಾಂಕ: 09.02.2017 ರಂದು ಯಥಾಸ್ಥಿತಿ ಆದೇಶವನ್ನು ಹೊರಡಿಸಲಾಗಿತ್ತು.ತರುವಾಯದಿನಾಂಕ: 08.06.2017 ರಂದಿನ ಆದೇಶದ ಮೇರೆಗೆ ಸದರಿ ಆದೇಶವನ್ನು ವಿಸ್ತರಿಸಲಾಗಿದೆ ಎಂಬ ನೈಜ ಸಂಗತಿ ನಿಶಾನೆ ಪಿ .4 ನ್ನು ಓದಿದ ತರುವಾಯ ಆಪಾದಿತನು ಎರಡನೇ ಮಹಡಿಯ ಮೇಲ್ಭಾವಣಿ ಅಂದರೆ ಮೂರನೇ ಮಹಡಿಯ ಮೇಲೆ ಯಾವುದೇ ಸ್ವರೂಪದ ಕಾಮಗಾರಿಯನ್ನು ಕೈಗೊಳ್ಳಬಾರದೆಂಬುದನ್ನು ನಿರ್ದಿಷ್ಟಪಡಿಸುತ್ತದೆ.ಆದರೆ, ನಿಶಾನೆ ಪಿ .19 ರ ಛಾಯಾಚಿತ್ರದಲ್ಲಿ ಕಾಣಿಸುತ್ತಿರುವುದು, ಲೋಹ ಹಾಳೆಯ ಮೇಲೆ ಸಿಮೆಂಟಿನ ಜಲ ನಿರೋಧಕ (ವಾಟರ್ ಪ್ರೂಫಿಂಗ್ ಕೆಲಸ) ಎಂಬುದನ್ನು ಆಪಾದಿತನು ಪಾಟೀಸವಾಲಿನಲ್ಲಿ ಒಪ್ಪಿಕೊಂಡಿರುತ್ತಾನೆ.ಈ ಒಪ್ಪಿಗೆಯಿಂದ, ಆತನು ಎರಡನೇ ಮಹಡಿಯ ಮೇಲೆ ನಿರ್ಮಾಣ ಕಾಮಗಾರಿಯನ್ನು ಕೈಗೊಂಡಿರುತ್ತಾನೆಂಬುದನ್ನು ಸೂಚಿಸುತ್ತದೆ.ಆಪಾದಿತನು, ಆದೇಶದ ದಿನಾಂಕದಂದು ಎಲ್ಲಿ ಹೇಗೆ ಇದೆಯೋ ಹಾಗೆ ನಿರ್ವಹಿಸಬೇಕೆಂಬ ಯಥಾಸ್ಥಿತಿ ಆದೇಶವನ್ನು ಅರ್ಥೈಸಿಕೊಂಡಿರುತ್ತಾನೆ.ಅಲ್ಲದೆ, ಆತ ಎರಡನೇ ಮಹಡಿಯ ಮೇಲೆ ಯಾವುದೇ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬಾರದೆಂದು ತರುವಾಯದ ಆದೇಶವು ಸೂಚಿಸುತ್ತದೆಂಬುದನ್ನು ಸಹ ಒಪ್ಪಿಕೊಳ್ಳುತ್ತಾನೆ.ಆಪಾದಿತನು, ಲೋಹದ ಹಾಳೆ ಮೇಲೆ ಸಿಮೆಂಟಿನ ಜಲ ನಿರೋಧಕ (ವಾಟರ್ ಪ್ರೂಫ್) ಕೆಲಸ ಮಾತ್ರವೆಂದು ಹೇಳಿ ಮತ್ತೆ ನಿರ್ಮಾಣ ಕಾರ್ಯ ಕೈಗೊಳ್ಳಲು ಪ್ರಯತ್ನವನ್ನು ಮಾಡಿರುತ್ತಾನೆ.ಹಾಗಾಗಿ ಆತ ಹೆಚ್ಚಿನ ನಿರ್ಮಾಣ ಕಾರ್ಯವನ್ನು ಹಾಗೂ ಲೋಹದ ಹಾಳೆಯ ಮೇಲೆ ಸಿಮೆಂಟಿನ ಜಲ ನಿರೋಧಕ ಕೆಲಸವನ್ನು (ವಾಟರ್ ಸ್ಪ್ರೂಫ್) ಮಾಡಿಸಿರುತ್ತಾನೆಂಬುದು ಸ್ಪಷ್ಟವಾಗುತ್ತದೆ.ಆಪಾದಿತನ ಈ ನಡತೆಯು ನ್ಯಾಯಾಲಯ ಆದೇಶದ ಉದ್ದೇಶಪೂರ್ವಕ ಉಲ್ಲಂಘನೆಯಲ್ಲದೆ ಬೇರೆನೂ ಅಲ್ಲ. ನಿಂದನಾ ಅಧಿಕಾರವ್ಯಾಪ್ತಿಯನ್ನು ಅನ್ವಯಿಸುವ ಸಲುವಾಗಿ ಒಂದು ಆದೇಶವಿರಬೇಕು ಮತ್ತು ಅದರ ಉಲ್ಲಂಘನೆಯಾಗಿರಬೇಕು.ಸದರಿ ಉಲ್ಲಂಘನೆಯ ಉದ್ದೇಶಪೂರ್ವಕ ಉಲ್ಲಂಘನೆಯಾಗಿರಬೇಕು ಹಾಗೂ ಈ ಪ್ರಕರಣದಲ್ಲಿ ಆಪಾದಿತನು ಆದೇಶವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿದ್ದು, ಇದು, ನ್ಯಾಯಾಲಯಗಳ ನಿಂದನಾ ಅಧಿನಿಯಮ, 1971 ರ 2 (ಬಿ) ಪ್ರಕರಣದಡಿಯಲ್ಲಿನ ನ್ಯಾಯಾಲಯ ನಿಂದನೆಯಾಗುತ್ತದೆ.

32. ಹಾಗಾಗಿ, ಪಟೇಲ್ ರಜನಿಕಾಂತ್ ಧುಲಾಬಾಯಿ ಮೊಕದ್ದಮೆಯಲ್ಲಿ (ಪೂರ್ವೋಕ್ತ) ದಲ್ಲಿ ವಿಧಿಸಿದ ತತ್ವಗಳ ಹಿನ್ನೆಲೆಯಲ್ಲಿ, ನ್ಯಾಯಾಲಯವು, ನಿಂದನಾ ಅಧಿನಿಯಮದ ಉಪಬಂಧಗಳನ್ನು ಅನ್ವಯಿಸಲು ಹಿಂಜರಿಯಬಾರದು.ಸದರಿ ಉಪಬಂಧಗಳಲ್ಲಿ ಯುಕ್ತ ನ್ಯಾಯಾಡಳಿತಕ್ಕಾಗಿ ಹಾಗೂ ನ್ಯಾಯಾಲಯವು ಹೊರಡಿಸಿದ 0 ಆದೇಶದ ಯುಕ್ತ ಪಾಲನೆಯನ್ನು ಖಚಿತಪಡಿಸಲು, ಅಧಿನಿಯಮದಡಿಯಲ್ಲಿ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳುವುದನ್ನು ಇದು ಅಗತ್ಯಪಡಿಸುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.ಹಾಗಾಗಿ, ನ್ಯಾಯಾಲಯದ ಮುಂದೆ ಲಭ್ಯವಿರುವ ಸಾಕ್ಷ್ಯದಿಂದ ಆಪಾದಿತನು, ನ್ಯಾಯಾಲಯಗಳ ನಿಂದನಾ ಅಧಿನಿಯಮದ 12 ನೇ ಪ್ರಕರಣದಡಿಯಲ್ಲಿ ಉದ್ದೇಶಪೂರ್ವಕವಾಗಿ ಅಪರಾಧವನ್ನು ಎಸಗಿರುತ್ತಾನೆಂಬುದು ಸ್ಪಷ್ಟವಾಗುತ್ತದೆ.

33. ಆಪಾದಿತನ ಪರ ಹಾಜರಾದ ಮಾನ್ಯ ವಕೀಲನು,ದಿನಾಂಕ: 08.06.2017 ಕ್ಕೆ ಮೊದಲು ಕಾಮಗಾರಿಯನ್ನು ಪೂರ್ಣಗೊಳಿಸಿರುತ್ತಾನೆಂದು ನಿವೇದಿಸಿಕೊಂಡಿದ್ದು, ತನ್ನ ವಾದವನ್ನು ಪುಷ್ಟೀಕರಿಸುವ ದೃಷ್ಟಿಯಿಂದ ಆತ ನಿಶಾನೆ ಡಿ .5 ಹಾಗೂ ಕನ್ನು ಅವಲಂಬಿಸಿರುತ್ತಾನೆ.ಸಿ.ಡಬ್ಲ್ಯು .1 ರ ಪಾಟೀ ಸವಾಲಿನಿಂದ ಆತನಿಗೆ ತೋರಿಸಿದ

ಛಾಯಾಚಿತ್ರಗಳು ಕಟ್ಟಡದ ಒಳಗಿನಿಂದ ತೆಗೆದ ಛಾವಣಿಯ ಛಾಯಾಚಿತ್ರಗಳಾಗಿವೆಯೆಂದು ತಿಳಿದುಬಂದಿದ್ದು, ಅವುಗಳನ್ನು ನಿಶಾನೆ ಡಿ .1 ಹಾಗೂ 2 ಎಂದು ಗುರುತು ಮಾಡಲಾಗಿದೆ.ಅಲ್ಲದೆ, ನ್ಯಾಯವಾದಿಗಳು, ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದರಪಟ್ಟಿಯ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆಯೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆಂದೂ ವಾದಿಸಿರುತ್ತಾರೆ.ಸದರಿ ದರಪಟ್ಟಿಯನ್ನು ನಿಶಾನೆ ಡಿ .4 ಎಂದು ಗುರುತು ಮಾಡಲಾಗಿದೆ.ನಿಶಾನೆ ಡಿ .4 ನ್ನು ಉದಾಹರಿಸುವ ಮೂಲಕ, ನ್ಯಾಯವಾದಿಯು, ಕಾಮಗಾರಿಯನ್ನು ಪೂರ್ಣಗೊಳಿಸುವುದಕ್ಕಾಗಿ ಗುತ್ತಿಗೆದಾರನು ಕ್ಲೇಮನ್ನು ಮಾಡಿದ್ದು, ಹಣಸಂದಾಯ ಮಾಡಲಾಗಿದೆಯೆಂದೂ ವಾದಿಸಿರುತ್ತಾನೆ.ಗುತ್ತಿಗೆದಾರನು ಮಾಡಿದ ಕಾಮಗಾರಿಗೆ ಸಂಬಂಧಿಸಿದಂತೆ ಘೋಷಣೆಯನ್ನು ಮತ್ತು ಹಣದ ಕ್ಲೇಮನ್ನು ಸಹ ಮಾಡಲಾಯಿತು ಎಂಬ ಬಗ್ಗೆ ಯಾವುದೇ ಸಂಶಯವಿರುವುದಿಲ್ಲವೆಂಬುದನ್ನು ಗಮನಿಸಿಕೊಳ್ಳಬೇಕಾಗಿರುತ್ತದೆ.ಅಲ್ಲದೆ, ಇದನ್ನು ನಿಶಾನೆ ಪಿ .5 ರ ಪ್ರಕಾರ ಮೌಲ್ಯವರ್ಧಿತ ತೆರಿಗೆ 100 ರ ನಮೂನೆಯಲ್ಲಿ ಇದನ್ನು ಘೋಷಿಸಿದ್ದನೆಂಬುದು ಆಪಾದಿತನ ವಾದವಾಗಿರುತ್ತದೆ.ಈ ದಸ್ತಾವೇಜುಗಳು, ಪೂರ್ಣಗೊಳಿಸಲಾದ ಕಾಮಗಾರಿಗಳಿಗೆ ಸಂಬಂಧಿಸಿದವಾಗಿದ್ದು, ಅದನ್ನು ಘೋಷಿಸಲಾಗಿರುತ್ತದೆ ಮತ್ತು ಮೂರನೇ ಮಹಡಿಯ ಕಾಮಗಾರಿಯು ಪೂರ್ಣಗೊಳ್ಳುವುದಕ್ಕೆ ಸಂಬಂಧಿಸಿದಂತೆ ಯಾವುದೇ ದೃಢಕ್ತಿಗಳಿರುವುದಿಲ್ಲವೆಂದು ಗಮನಿಸಬೇಕಾಗಿದೆ.ನಿಶಾನೆ ಪಿ .5 ರಿಂದ 9 ಹಾಗೂ 12 ರಿಂದ 17 ಎಂದು ಗುರುತು ಮಾಡಲಾದಂಥ ಛಾಯಾಚಿತ್ರಗಳು, ಮಧ್ಯಂತರ ಆದೇಶವನ್ನು ಮಾಡಿದ ತರುವಾಯ ಸಹ ಕಾಮಗಾರಿಯನ್ನು ಮುಂದುವರೆಸಿರುತ್ತಾರೆಂಬುದನ್ನು ತೋರಿಸುತ್ತಿರುವಾಗ ಆಪಾದಿತನ ಸದರಿ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

34. ದಾಖಲೆಯಲ್ಲಿನ ಸಾಕ್ಷ್ಯವನ್ನು ಪರಿಗಣಿಸಿ, ನ್ಯಾಯಾಲಯದ ನಿರ್ದಿಷ್ಟ ಆದೇಶವಿದ್ದರೂ, ಆಪಾದಿತನು ಆದೇಶವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿರುತ್ತಾನೆಂಬ ತೀರ್ಮಾನಕ್ಕೆ ಬರುವುದಕ್ಕಾಗಿ, ದೆಹಲಿ ಅಭಿವೃದ್ಧಿ ಪ್ರಾಧಿಕಾರ -ವಿರುದ್ಧ-ಸ್ಕಿಪ್ಪರ್ ಕನ್ಸಟ್ರಕ್ಷನ್ ಕೋ. (ಪ್ರೈ) ಅ. ಹಾಗೂ ಮತ್ತೊಬ್ಬರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸುವುದು ಯುಕ್ತವಾದುದಾಗಿರುತ್ತದೆ.ಅದರಲ್ಲಿ, ನಿಂದನೆ ಮಾಡಿದವನನ್ನು, ತನ್ನ ನಿಂದನಾ ಫಲವನ್ನು ಅನುಭವಿಸಲು ಅಥವಾ ಉಳಿಸಿಕೊಳ್ಳಲು ಅನುಮತಿಸುವಂತಿಲ್ಲವೆಂದು ಅಭಿಪ್ರಾಯಪಡಲಾಗಿರುತ್ತದೆ.ಸದರಿ ತೀರ್ಪಿನ 17 9, 18 ಹಾಗೂ 21 ನೇ ಪ್ಯಾರಾಗಳು ಈ ಮುಂದಿನಂತಿರುತ್ತವೆ:

“17. ನಿಂದನೆ ಮಾಡಿದವನಿಗೆ, ತನ್ನ ನಿಂದನೆಯ ಫಲಗಳನ್ನು ಅನುಭವಿಸಲು ಹಾಗೂ/ಅಥವಾ ಉಳಿಸಿಕೊಳ್ಳಲು ಯಾವುದೇ ಕಾರಣಕ್ಕೂ ಅನುಮತಿಸಲಾಗುವುದಿಲ್ಲವೆಂಬ ತತ್ವ ಸರ್ವ ವಿಧಿತವಾಗಿದೆ.ಮೊಹಮದ್ ಇದ್ರಿಸ್ ವಿ.ಆರ್. ಜೆ ಬಾಬುಜಿ [1985 ( 1) ಎಸ್ಸಿ ಆರ್ 598] ಮೊಕದ್ದಮೆಯಲ್ಲಿ ಈ ನ್ಯಾಯಾಲಯವು, ನಿಂದನೆಗೆ ಸಂಬಂಧಿಸಿದ ದಂಡನೆಗೆ ಒಳಗಾಗಿದ್ದಾರೆಂದರೆ, ನ್ಯಾಯಾಲಯವು ತನ್ನ ಆದೇಶಗಳನ್ನು ಉಲ್ಲಂಘಿಸಿ ಮಾಡಲಾದ ಸಂಗತಿಗಳಿಗೆ ಪರಿಹಾರ ನೀಡಲು ಹಾಗೂ ಸರಿಪಡಿಸಲು ಯುಕ್ತ ನಿರ್ದೇಶನಗಳನ್ನು ನೀಡಲು ನ್ಯಾಯಾಲಯವು ಹಕ್ಕುಳ್ಳದ್ದಾಗಿರುವುದಿಲ್ಲವೆಂದು ಅರ್ಥವಲ್ಲ ಎಂದು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿರುತ್ತದೆ.ಇಲ್ಲಿನ ಅರ್ಜಿದಾರರು ಬಾಂಬೆ ಉಚ್ಚ ನ್ಯಾಯಾಲಯಕ್ಕೆ ಮುಚ್ಚಳಿಕೆಯನ್ನು ನೀಡಿರುತ್ತಾರೆ.ಅವರು ಇದಕ್ಕೆ ವ್ಯತಿರಿಕ್ತವಾಗಿ ವರ್ತಿಸಿರುತ್ತಾರೆ.ಮಾನ್ಯ ಏಕಸದಸ್ಯ ಪೀಠದ ನ್ಯಾಯಾಧೀಶರು, ಅವರನ್ನು ನಿಂದನಾ ತಪ್ಪಿತಸ್ಥರೆಂದು ಅಭಿಪ್ರಾಯಪಟ್ಟು, ಒಂದು ತಿಂಗಳ ಕಾರಾವಾಸ ಶಿಕ್ಷೆಯನ್ನು ವಿಧಿಸಿರುತ್ತಾರೆ.ಅದಕ್ಕೆ ಹೆಚ್ಚುವರಿಯಾಗಿ, ಮಾನ್ಯ ಏಕ-ಸದಸ್ಯ ಪೀಠದ ನ್ಯಾಯಾಧೀಶರು

ಮುಚ್ಚಳಿಕೆಯ ಉಲ್ಲಂಘನೆಯ ಪರಿಹಾರಕ್ಕೆ ಯುಕ್ತ ನಿರ್ದೇಶನಗಳನ್ನು ನೀಡಿರುತ್ತಾರೆ.ನ್ಯಾಯಾಲಯ ನಿಂದನೆಗೆ ಸಂಬಂಧಿಸಿದಂತೆ ಅರ್ಜಿದಾರರನ್ನು ದಂಡಿಸುವುದರ ಜೊತೆಗೆ ಮೇಲೆ ಹೇಳಿದ ನಿರ್ದೇಶನಗಳನ್ನು ನೀಡಿರುವ ಬಗ್ಗೆ ಮಾನ್ಯ ನ್ಯಾಯಾಧೀಶರನ್ನು ಸಮರ್ಥಿಸಿಕೊಳ್ಳಲಾಗಿಲ್ಲವೆಂದು ಈ ನ್ಯಾಯಾಲಯದ ಮುಂದೆ ವಾದಿಸಲಾಗಿರುತ್ತದೆ.ಏಕಸದಸ್ಯ ಪೀಠದ ನ್ಯಾಯಾಧೀಶರು ಮುಚ್ಚಳಿಕೆಯು ಉಲ್ಲ ಂ ಘನೆಯನ್ನು ಮುಕ್ತಾಯಗೊಳಿಸಲು ಯುಕ್ತ ನಿರ್ದೇಶನಗಳನ್ನು ನೀಡುವಲ್ಲಿ ಸರಿಯಾದ ತೀರ್ಮಾನ ಮಾಡಿರುತ್ತಾರೆಂದು ಅಭಿಪ್ರಾಯಪಟ್ಟು ವಾದವನ್ನು ತಿರಸ್ಕರಿಸಿರುತ್ತದೆ "

18. ಮೇಲಿನ ತತ್ವಗಳನ್ನು ಸಿವಿಲ್ ನ್ಯಾಯಾಲಯಗಳು ಹೊರಡಿಸಿದ ನಿರ್ಬಂಧಕಾಜ್ಞೆಯ ಆದೇಶಗಳ ಉಲ್ಲಂಘನೆಯ ಸಂದರ್ಭದಲ್ಲೂ ಕೂಡ ಅನ್ವಯಿಸಲಾಗಿರುತ್ತದೆ.ಕ್ಲಾರ್ಕ್ -ವಿರುದ್ಧ ಚಡ್ವರ್ನ್ [1985 ( 1) ಎಎಲ್ಎಲ್.ಇ.ಆರ್ .211] ಮೊಕದ್ದಮೆಯಲ್ಲಿ ಮಾನ್ಯ ರಾಬರ್ಟ್ ಮೆಗರಿ.ವಿ.ಸಿ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತಾರೆ:

" ನ್ಯಾಯಾಲಯದ ಆದೇಶಗಳನ್ನು ಮನ್ನಿಸಬೇಕೆಂಬುದು ಅತ್ಯಂತ ಪ್ರಮುಖವಾದ ವಿಷಯವೆಂಬ ಪ್ರಸ್ತಾವವನ್ನು ಪ್ರಾಧಿಕಾರಿಗಳಿಗೆ ಉಲ್ಲೇಖಿಸುವ ಅವಶ್ಯಕತೆ ನನಗಿರುವುದಿಲ್ಲ.ನ್ಯಾಯಾಲಯದ ಆದೇಶದ ಉದ್ದೇಶಪೂರ್ವಕ ಉಲ್ಲಂಘನೆಯು ನ್ಯಾಯಾಲಯದ ನಿಂದನೆಯ ಂ ಬ ಂ ತೆ ದಂಡನೀಯವಾಗಿರುತ್ತದೆ ಹಾಗೂ ಅಂಥ ಉಲ್ಲಂಘನೆಯನ್ನು ಕಾನೂನು ಬಾಹಿರವೆಂದು ಯುಕ್ತವಾಗಿ ವಿವರಿಸಿಕೊಳ್ಳ ಬಹುದೆಂಬುದರಲ್ಲಿ ನನಗೆ ಯಾವುದೇ ಸಂದೇಹವಿರುವುದಿಲ್ಲ. ಅಂಥ ಉಲ್ಲಂಘನೆಯ ಮೂಲಕ, ವ್ಯಕ್ತಿಗಳು ತಾವು ಇತರರ ಹಕ್ಕುಗಳು ಹಾಗೂ ಹೊಣೆಗಾರಿಕೆಗಳಲ್ಲಿ ಸಿಂಧುವಾಗಿ ಪರಿಣಾಮಕಾರಿಯಾದ ಕೆಲವು ಜವಾಬ್ದಾರಿಗಳನ್ನು ಹೊ ಂ ದಿರುತ್ತೇವೆಂದು ವ್ಯಕ್ತಿಗಳು ಕ್ಲೇಮನ್ನು ಅನುಭವಿಸುತ್ತಿದ್ದಲ್ಲಿ, ಅವರು ಎಸಗಿರುವ ಕೃತ್ಯಗಳು ನ್ಯಾಯಾಲಯದ ನಿಂದನೆಗೆ ಸಂಬಂಧಿಸಿದ ದ ಂ ಡನೆಗೆ ಅರ್ಹವಾಗಿದ್ದಾಗ್ಯೂ, ಆ ಕೃತ್ಯಗಳನ್ನು ಸಿಂಧುವಾಗಿ ಮಾಡಲಾಗಿದೆಯೆಂದು ಏಕೆ ಹೇಳಬೇಕೆಂಬುದು ನನಗೆ ತಿಳಿಯುತ್ತಿಲ್ಲ.ಖಂಡಿತ, ಒಂದು ಕೃತ್ಯವನ್ನು ಎಸಗಿದ್ದಲ್ಲಿ, ಅದನ್ನು ಕಾನೂನನ್ನು ಉಲ್ಲಂಘಿಸಿ ಮಾಡಲಾಯಿತೆಂದು ಪ್ರಸ್ತಾಪಿಸುವುದಕ್ಕೆ ಮಾತ್ರವೇ ರದ್ದುಪಡಿಸಲಾಗುವುದಿಲ್ಲ.ನಿರ್ಬಂಧಕಾಜ್ಞೆಯನ್ನು ಉಲ್ಲಂಘಿಸಿ ಸಭೆ ನಡೆಸಿದರೆ ಸಭೆ ನಡೆದಿಲ್ಲ ಎಂದು ಹೇಳಲಾಗುವುದಿಲ್ಲ.ಆದರೆ ಕಾನೂನನ್ನು ಉಲ್ಲ ಂ ಘಿಸಿ ಏನನ್ನು ಮಾಡಲಾಗಿದೆಯೋ ಅದರ ಕಾನೂನಾತ್ಮಕ ಫಲಿತಾಂಶಗಳ ಮೇಲೆ ಸ್ಪಷ್ಟವಾಗಿ, ಅಂಥ ಕಾನೂನುಬಾಹಿರತೆಯಿ ಂ ದ ಹೆಚ್ಚಿನ ಪ್ರಮಾಣದ ತೊ ಂ ದರೆಯು ಂ ಟಾಗಬಹುದಾಗಿರುತ್ತದೆ.ನಿಷೇಧವನ್ನು ನಿರಾಕರಿಸುವವರು ತಮ್ಮ ನಿರಾಕರಣೆಯ ಫಲಗಳು ಉತ್ತಮವೆಂದು ಹಾಗೂ ಅವರು ಸೃಷ್ಟಿಸುವ ಅಕ್ರಮದಿಂದ ಅವು ಕಳ ಂ ಕಿತವಾಗುವುದಿಲ್ಲವೆಂದು ಅವರು ಕ್ಲೇಮು ಮಾಡಲು ಸಾಧ್ಯವಾಗಬಾರದೆಂಬ ತತ್ವದ ಮೇಲೆ ನನಗೆ ಕಂಡು ಬರುತ್ತದೆ.

21. ನ್ಯಾಯಾಲಯವು, ಅಗತ್ಯವೆನಿಸಿದರೆ ಯಾವುದೇ ಕಾರ್ಯವಿಧಾನ ಅಥವಾ ಇತರೆ ತಾಂತ್ರಿಕ ಆಕ್ಷೇಪಣೆಗಳನ್ನು ತಳ್ಳಿಹಾಕುವ ಮೂಲಕ ಶಾಸನಾತ್ಮಕ ನಿಯಮವನ್ನು ಅನ್ವಯಿಸಿ ಜಾರಿಗೊಳಿಸಬೇಕಾಗುತ್ತದೆ ಎಂಬ ಬಗ್ಗೆ ಯಾವುದೇ ಸಂದೇಹವಿರುವುದಿಲ್ಲ.129 ನೇ ಅನುಚ್ಛೇದವು ಸಂವಿಧಾನಾತ್ಮಕ ಅಧಿಕಾರವಾಗಿದ್ದು, 142 ನೇ ಅನುಚ್ಛೇದದೊಂದಿಗೆ ಏಕಸಾಲಿನಲ್ಲಿ ಚಲಾಯಿಸಿದಾಗ, ಎಲ್ಲ ಅಂಥ ಆಕ್ಷೇಪಣೆಗಳಿಗೆ ಎಡೆಮಾಡಿಕೊಡಬೇಕು.ನ್ಯಾಯಾಲಯವು ತನ್ನ ಮುಂದಿರುವ ಪಕ್ಷಕಾರರ ನಡುವೆ ಸಂಪೂರ್ಣ ನ್ಯಾಯವನ್ನು ಖಚಿತಪಡಿಸಬೇಕು ".

35. ಹಿಂದೆ ಹೇಳಿದ ತೀರ್ಪಿನಲ್ಲಿ ವಿಧಿಸಿದ ತತ್ವಗಳನ್ನು ಪರಿಗಣಿಸಿ ನ್ಯಾಯಾಲಯವು, ನಿಂದನಾ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವಾಗ ನ್ಯಾಯಾಲಯದ ನಿರ್ದಿಷ್ಟ ಆದೇಶವಿದ್ದಾಗ್ಯೂ, ಕೈಗೊಂಡಂಥ ಕಾಮಗಾರಿಯನ್ನು ತೆರವುಗೊಳಿಸಲು ಕೆಲವು ನಿರ್ದೇಶನಗಳನ್ನು ನೀಡಬಹುದೆಂಬದು ಸ್ಪಷ್ಟವಾಗಿರುತ್ತದೆ.ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯವು ಸಹ, ಆಪಾದಿತನು ಆದೇಶವನ್ನು ಉಲ್ಲಂಘಿಸುವ ಕೃತ್ಯವನ್ನು ಎಸಗಿ, ನಿಂದನಾ ತಪ್ಪಿತಸ್ಥನೆಂದು ನಿರ್ಣಯವಾಗಿದ್ದಲ್ಲಿ, ನ್ಯಾಯಾಲಯವು, ಎಸಗಿದ ಉಲ್ಲಂಘನೆಯ ಪರಿಹಾರಕ್ಕೆ ಯುಕ್ತ ನಿರ್ದೇಶನಗಳನ್ನು ನೀಡಬಹುದೆಂದು ಅಭಿಪ್ರಾಯಪಟ್ಟಿರುತ್ತದೆ.

36. ಮೇಲೆ ಮಾಡಲಾದ ಚರ್ಚೆ ಹಾಗೂ ಹಿಂದೆ ಉಲ್ಲೇಖಿಸಿದ ತೀರ್ಪುಗಳಲ್ಲಿ ವಿಧಿಸಿದ ತತ್ವಗಳ ಹಿನ್ನೆಲೆಯಲ್ಲಿ, ನಾವು, ಅಪಾದಿತನು ಈ ನ್ಯಾಯಾಲಯದ ಆದೇಶವನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿರುವುದಕ್ಕಾಗಿ ಅವನನ್ನು ಶಿಕ್ಷೆಗೊಳಪಡಬೇಕಾಗಿರುವುದಲ್ಲದೆ, ಯಥಾಸ್ಥಿತಿ ಆದೇಶ ಹಾಗೂ ಮಧ್ಯಂತರ ಆದೇಶದ ವಿಸ್ತರಣೆಯನ್ನು ಹೊರಡಿಸಿದ ತರುವಾಯ ಕೈಗೊಂಡಂಥ ಕಾಮಗಾರಿಯನ್ನು ತೆರವುಗೊಳಿಸಲು ಆಪಾದಿತನಿಗೆ ನಿರ್ದೇಶನಗಳನ್ನು ನೀಡಬೇಕಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತೇವೆ.

37. ಮೇಲೆ ಮಾಡಲಾದ ಚರ್ಚೆಯ ಹಿನ್ನೆಲೆಯಲ್ಲಿ, ನಾವು ಈ ಮುಂದಿನಂತೆ ಆದೇಶಿಸಿರುತ್ತೇವೆ:

ಆದೇಶ

(i) ನಿಂದನಾ ಅರ್ಜಿಯನ್ನು ಅಂಗೀಕರಿಸಲಾಗಿದೆ.

(ii) ಆಪಾದಿತನು, ನ್ಯಾಯಾಲಯ ನಿಂದನಾ ಅಧಿನಿಯಮ, 1971 ರ 12 ನೇ ಪ್ರಕರಣದಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವುದಕ್ಕೆ ಅವನನ್ನು ಅಪರಾಧಿಯೆ ೦ ದು ತೀರ್ಮಾನಿಸಲಾಗಿದೆ.

(iii) ಆಪಾದಿತನು, ಎರಡು ತಿಂಗಳುಗಳ ಅವಧಿಯ ಸಾದಾ ಕಾರಾವಾಸ ಶಿಕ್ಷೆಗೆ ಒಳಗಾಗಿದ್ದು, ರಿಜಿಸ್ಟ್ರಿಯವರ ಬಳಿ 2,000/- ರೂ.ಗಳ ಶುಲ್ಕವನ್ನು ಸಂದಾಯ ಮಾಡಲು ನಿರ್ದೇಶಿಸಲಾಗಿದೆ.ಶುಲ್ಕವನ್ನು ಸಂದಾಯ ಮಾಡಲು ತಪ್ಪಿದಲ್ಲಿ, ಆತ ಒಂದು ತಿಂಗಳ ಹೆಚ್ಚಿನ ಸಾದಾ ಕಾರಾವಾಸ ಶಿಕ್ಷೆಗೆ ಒಳಪಡತಕ್ಕದ್ದು.

(iv) ಆಪಾದಿತನು, ಈ ಆದೇಶದ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ಎರಡನೇ ಮಹಡಿಯ ಮೇಲ್ಛಾವಣಿಯ ಮೇಲೆ ಅಂದರೆ ಮೂರನೇ ಮಹಡಿಯಲ್ಲಿ ಮಾಡಲಾದ ನಿರ್ಮಿತಿಯನ್ನು ತೆರವುಗೊಳಿಸಲೂ ಸಹ ಆಪಾದಿತನಿಗೆ ನಿರ್ದೇಶಿಸಲಾಗಿದೆ.